ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯಸಮಿತಿಯ ಮುಖಪತ್ರಿಕೆ

ಸಂಪುಟ 3 | ಸಂಚಿಕೆ 48 | ನವೆಂಬರ್ 29, 1981 | ಬೆಲೆ : 60 ಪೈಸೆ

ಪಾಕಿಸ್ತಾನಕ್ಕೆ ಭಾರತದ ಆಹ್ವಾನ

ಭಾರತ ಮತ್ತು ಪಾಕಿಸ್ತಾನಗಳ ನಡುವಣ ಸಂಬಂಧ ಹದಗೆಡುತ್ತಾ ಬಂದಿರುವುದು ಎಲ್ಲರನ್ನೂ ಚಿಂತನೆಗೊಳಪಡಿಸಿದೆ. ಪಾಕಿಸ್ತಾನ ಇತ್ತೀಚೆಗೆ ಅನುಸರಿಸಿದ ವಿದೇಶಾಂಗ ನೀತಿ ಮತ್ತು ತೆಗೆದುಕೊಂಡ ಕೆಲಕ್ರಮಗಳು ಭಾರತಕ್ಕೆ ಅಪಾಯ ತರುವಂತಹವುಗಳಾಗಿದ್ದು ಯುದ್ಧ ಪ್ರಚೋದನಾ ಕಾರಿಗಳಾಗಿವೆ. ಅಪ್ಘಾನಿಸ್ತಾನದ ಪ್ರತಿಗಾಮಿ ಪಿತೂರಿಗಾರರಿಗೆ ಕೊಡುತ್ತಿರುವ ಆಶ್ರಯ ಮತ್ತು ನೆರವು, ಅಮೇರಿಕದೊಂದಿಗೆ ಯುದ್ಧ ಸಾಮಗ್ರಿಗಳನ್ನೊದಗಿಸಲು ಮಾಡಿದ ಒಪ್ಪಂದ ಇವುಗಳು ಖಂಡನಾರ್ಹವಾಗಿವೆ. ಆದರೂ ಅಮೇರಿಕ ಮತ್ತಿತರ ಪಾಶ್ಚಿಮಾತ್ಯ ದೇಶಗಳಲ್ಲಿ ಪ್ರಚಾರ ನಡೆಸುವ ದೃಷ್ಟಿಯಿಂದ ಅಮೇರಿಕದ ಯುದ್ಧ ಸರಬರಾಜು ಒಪ್ಪಂದಕ್ಕೊಂದು ಮುಖವಾಡ ಬೇಕೆಂದು ತಿಳಿದು ಇದರ ಬಗ್ಗೆ ದೀರ್ಘ ವಿವರಣೆ ಕೊಡುವ ತನ್ನ ಹೇಳಿಕೆಯಲ್ಲಿ ಭಾರತದೊಂದಿಗೆ ತಾನು ಯುದ್ಧ ನಿರೋಧ ಒಪ್ಪಂದಕ್ಕೆ ಸಿದ್ಧವಿರುವುದಾಗಿ ಹೇಳಿದೆ. ಈ ಹೇಳಿಕೆಯು ಬಂದ ಸಂದರ್ಭವನ್ನು ನೋಡಿದರೆ ಇದರ ಬಗ್ಗೆ ಪಾಕಿಸ್ತಾನ ಸರಕಾರಕ್ಕೆ ಆಸಕ್ತಿ ಇರುವುದು ಕಾಣಿಸುವುದಿಲ್ಲ.

ಸಂಪಾದಕೀಯ

ಈ ಪ್ರಶ್ನೆಯ ಬಗ್ಗೆ ಭಾರತ ಸರಕಾರದ ನಿಲುವನ್ನು ಕೇಂದ್ರ ವಿದೇಶಾಂಗ ಸಚಿವರು ಲೋಕಸಭೆಯಲ್ಲಿ ಸ್ಪಷ್ಟಪಡಿಸಿದ್ದಾರೆ. ಭಾರತ ಸರಕಾರ ಹಿಂದೆ ಮೂರು ಬಾರಿ 1949, 1954 ಮತ್ತು 1969ರಲ್ಲಿ ಯುದ್ಧ ನಿರೋಧ ಒಪ್ಪಂದದ ಸಲಹೆ ನೀಡಿದಾಗಲೂ ಪಾಕಿಸ್ತಾನವು ಅದನ್ನು ತಿರಸ್ಕರಿಸುತ್ತಾ ಬಂದು ಈಗ ಅಮೇರಿಕಾದಿಂದ ಕೋಟ್ಯಾಂತರ ರೂಪಾಯಿ ಬೆಲೆಬಾಳುವ ಶಸ್ತ್ರಾಸ್ತ್ರಗಳನ್ನು ಪಡೆಯುತ್ತಿರುವಾಗ ಆ ಸಂಬಂಧದಲ್ಲಿ ಹೊರಡಿಸಿರುವ ಹೇಳಿಕೆಯಲ್ಲಿ ಈ ವಿಷಯವನ್ನೂ ಸೇರಿಸಿರುವುದನ್ನು ನೋಡಿದರೆ ಇದಕ್ಕೆಲ್ಲಿ ಮಹತ್ವವಿರುತ್ತದೆ? ಇದನ್ನು ಯಾರೂ ಗಂಭೀರವಾಗಿ ತೆಗೆದುಕೊಳ್ಳಲು ಸಾಧ್ಯವಿಲ್ಲ. ಆದರೂ ಸಹ ಪಾಕಿಸ್ತಾನ ಸರಕಾರ ಈ ಸಲಹೆಯನ್ನು ಗಂಭೀರವಾಗಿ ಮುಂಡಿಸಿದಲ್ಲಿ ಭಾರತ ಸರಕಾರ ಅದನ್ನು ಪರಿಶೀಲಿಸಲು ಸಿದ್ಧವಿದೆಂದು ಹೇಳಿರುವುದು ಸ್ವಾಗತಾರ್ಹವಾಗಿದೆ. ಪಾಕಿಸ್ತಾನ ಮುಂದೇನು ಮಾಡಲಿದೆಂಬುದನ್ನು ನೋಡಿಕೊಳ್ಳಬೇಕಾಗಿದೆ.

ಭಾರತ ಮತ್ತು ಪಾಕಿಸ್ತಾನ ರಾಷ್ಟ್ರಗಳು ನೆರೆ ರಾಷ್ಟ್ರಗಳಾಗಿರುವುದರಿಂದ ಇವೆರಡೂ ಸ್ನೇಹತ್ವದಿಂದ ಬಾಳುವುದಗತ್ಯ. ಇದಕ್ಕೆ ಪಾಕಿಸ್ತಾನವು ಯುದ್ಧಖೋರರನ್ನು ತ್ಯಜಿಸಿ ಭಾರತದೊಂದಿಗೆ ಸ್ನೇಹತ್ವದಿಂದ ಬಾಳಲೆಂದು ನಾವು ಹಾರೈಸುತ್ತೇವೆ. ●

ಗಢವಾಲ್ ಚುನಾವಣೆ ಮುಂದೂಡಿಕೆ

ಪಿತೂರಿಯಲ್ಲಿ ಚುನಾವಣಾ ಆಯೋಗ ಭಾಗಿ

ನವೆಂಬರ್ 22ರಂದು ನಡೆಯಬೇಕಾಗಿದ್ದ ಉತ್ತರ ಪ್ರದೇಶದ ಗಡವಾಲ್ ಕ್ಷೇತ್ರದ ಚುನಾವಣೆಯನ್ನು ಚುನಾವಣಾ ಆಯೋಗ ಮುಂದೂಡಿದೆ. ಸೋಲು ನಿಶ್ಚಿತವೆಂದು ಗೊತ್ತಿದ್ದ ಕಾಂಗ್ರೆ ಚುನಾವಣೆ ಮುಂದೂಡಲು ಹೂಡಿದ್ದ ಪಿತೂರಿಯಲ್ಲಿ ಚುನಾವಣಾ ಆಯೋಗವೂ ಭಾಗಿಯಾಗಿದೆ.

ಜೂನ್ 14ರಂದು ನಡೆದ ಚುನಾವಣಾ ಸಮಯದಲ್ಲಿ ಎಲ್ಲ ವಿರೋಧ ಪಕ್ಷಗಳ ಬೆಂಬಲಿತ ಅಭ್ಯರ್ಥಿ ಎಚ್. ಎನ್. ಬಹುಗುಣ ಅವರ ಕೈಯಿಂದ ಸೋಲು ನಿಶ್ಚಿತವೆಂದು ಕಾಂಗ್ರೆಗೆ ಗೊತ್ತಿತ್ತು. ಸ್ವತಃ ಪ್ರಧಾನಿಯವರು ಹೆಲಿಕ್ಯಾಪ್ಟರಿನಲ್ಲಿ ಸಂಚರಿಸಿ ಚುನಾವಣಾ ಪ್ರಚಾರ ಕೈಗೊಂಡಿದ್ದರು. ಐದು ಜನ ಮುಖ್ಯಮಂತ್ರಿಗಳು, ಸುಮಾರು 50 ಜನ ರಾಜ್ಯ ಮತ್ತು ಕೇಂದ್ರ ಮಂತ್ರಿಗಳು ರಾಜ್ಯಸರಕಾರದ ನೂರಾರು ವಾಹನಗಳೊಂದಿಗೆ ಗಡವಾಲ್ ಕ್ಷೇತ್ರದಲ್ಲಿ ಠಿಕಾಣಿ ಹೂಡಿದ್ದರು. ನೆರೆಯ ಪಂಜಾಬ್, ಹರಿಯಾಣಾಗಳ ಪೋಲೀಸ್ ಪಡೆ ಆಗಮಿಸಿತ್ತು. ಇಷ್ಟು ಸಾಲದೆಂಬಂತೆ ಕ್ಷೇತ್ರದ ಕೆಲವು ಭಾಗಗಳಲ್ಲಿ ಕಾಂಗ್ರೆ ಭಯೋತ್ಪಾದನೆ ಕೃತ್ಯಗಳಲ್ಲಿ ತೊಡಗಿದ್ದಷ್ಟೇ ಮತದಾನದಲ್ಲೂ ಮೋಸಮಾಡಿತ್ತು. ಬಹುಗುಣರು ಸುಮಾರು 12 ಮತಕ್ಷೇತ್ರಗಳಲ್ಲಿ ಮರುಚುನಾವಣೆಗಾಗಿ ಕೋರಿದ್ದರು. ಮುಖ್ಯ ಚುನಾವಣಾ ಆಯೋಗವು ಜೂನ್ 14ರಂದು ನಡೆದ ಮತದಾನವನ್ನೇ ರದ್ದುಪಡಿಸಿದ್ದರು. ಕಾಂಗ್ರೆಗೆ ರಾಜಕೀಯ-ನೈತಿಕ ಮುಖಭಂಗವಾಗಿತ್ತು.

(ಕಡೇ ಪುಟನೋಡಿ)

ಕೇಂದ್ರ ಸರಕಾರದ ಕಾರ್ಮಿಕ ವಿರೋಧಿ ನೀತಿಯನ್ನು ವಿರೋಧಿಸಿ

ದೆಹಲಿಯಲ್ಲಿ ಬೃಹತ್ ರ್‍ಯಾಲಿ

ನವೆಂಬರ್ 23ರಂದು ಕೇಂದ್ರ ಕಾರ್ಮಿಕ ಸಂಘಟನೆಗಳ, ರಾಷ್ಟ್ರೀಯ ಒಕ್ಕೂಟಗಳ ರಾಷ್ಟ್ರೀಯ ಆಂದೋಲನ ಸಮಿತಿಯ ನೇತೃತ್ವದಲ್ಲಿ ಪಾರ್ಲಿಮೆಂಟ್ ಚಲೋ ಕಾರ್ಯಕ್ರಮದಲ್ಲಿ ದೇಶದಾದ್ಯಂತದಿಂದ ಸುಮಾರು ಐದು ಲಕ್ಷಕ್ಕೂ ಮಿಕ್ಕಿ ಕಾರ್ಮಿಕರು ಪಾಲ್ಗೊಂಡಿದ್ದರು. ಇತ್ತೀಚಿನ ವರ್ಷಗಳಲ್ಲೇ ದೆಹಲಿಯ ಜನತೆ ಇಂಥ ಬೃಹತ್ ಮೆರವಣಿಗೆಯನ್ನು ಕಂಡಿರಲಿಲ್ಲವೆಂದು ಟೈಮ್ಸ್ ಆಫ್ ಇಂಡಿಯಾ ವರದಿ ಮಾಡಿದೆ.

ಕಾರ್ಮಿಕ ಚಳುವಳಿಯನ್ನು ಬಗ್ಗು ಬಡಿಯಲು ಜಾರಿಯಾದ ಅಗತ್ಯಸೇವಾ ನಿರ್ವಹಣೆ ಕಾನೂನು, ಬೆಲೆ ಏರಿಕೆ, ಸರಕಾರದ ಕಾರ್ಮಿಕ ವಿರೋಧಿ ನೀತಿಯನ್ನು ಪ್ರತಿಭಟಿಸಿ ಈ ರ್‍ಯಾಲಿಯನ್ನು ಸಂಘಟಿಸಲಾಗಿತ್ತು.

ಬೋಟ್‌ಕ್ಲಬ್‌ನಲ್ಲಿ ಸಮಾವೇಶಗೊಂಡ ಈ ಅಪೂರ್ವ ರ್‍ಯಾಲಿಯನ್ನುದ್ದೇಶಿಸಿ ಕಾಂ. ಸಮರ ಮುಖರ್ಜಿ(ಸಿ. ಐ. ಟಿ. ಯು), ಇಂದ್ರಜಿತ್ ಗುಪ್ತ(ಎ. ಐ. ಟಿ. ಯು. ಸಿ.), ಜತೀನ್ ಚಕ್ರವರ್ತಿ (ಯು. ಟಿ. ಯು. ಸಿ.), ಚಿತ್ತಬಸು(ಟಿ. ಯು. ಸಿ. ಸಿ.), ಟಿ. ಬಿ. ಥೇಂಗಡಿ(ಬಿ. ಎಂ. ಎಸ್.), ಬಿ ರೇ ಶ್ವ ರ ತ್ಯಾಗಿ (ಎಚ್. ಎಂ. ಎಸ್.), ಜೆ. ಎಸ್. ದಾರಾ (ಐ. ಎನ್. ಟಿ. ಯು. ಸಿ-ಎಸ್) ಮತ್ತು ಪ್ರೀತಮ್ ಚಂದ್ರ(ಯು. ಟಿ ಯು. ಸಿ.-ಲೆನಿನ್ ಸರಾಣಿ) ಇವರುಗಳು ಮಾತನಾಡಿದರು.

ಕಾಂ. ಸಮರ್ ಮುಖರ್ಜಿಯವರು ಮಾತನಾಡುತ್ತಾ ಅಗತ್ಯಸೇವಾ ನಿರ್ವಹಣೆ ಕಾನೂನನ್ನು ಜಾರಿಗೆ ತಂದು ಕಾರ್ಮಿಕರನ್ನು ಬಗ್ಗು ಬಡಿಯಲು ಹವಣಿಸಿರುವ ಕೇಂದ್ರ ಸರಕಾರವನ್ನು ಕಟುವಾಗಿ ಟೀಕಿಸಿದರು. ಐ. ಎಂ. ಎಫ್ ಸಾಲಕ್ಕೋಸ್ಕರ ರಾಷ್ಟ್ರ ಗೌರವವನ್ನು ಒತ್ತೆಯಿಟ್ಟಿರುವ ಇಂದಿರಾ ಸರಕಾರಕ್ಕೆ ಕಾಂ. ಸಮರ್ ಮುಖರ್ಜಿ ಛೀಮಾರಿ ಹಾಕಿದರು. ರಾಷ್ಟ್ರೀಯ ಭದ್ರತಾ ಕಾಯ್ದೆ, ಅಗತ್ಯಸೇವಾ ನಿರ್ವಹಣೆ ಕಾನೂನು ಮೊದಲಾದ ಕರಾಳ ಕಾಯ್ದೆಗಳನ್ನು ವಾಪಸ್ ತೆಗೆದುಕೊಳ್ಳುವಂತೆ ಒತ್ತಾಯಿಸಿದರು.

ಕಾಂ. ಇಂದ್ರಜಿತ್ ಗುಪ್ತಾ ಮಾತನಾಡುತ್ತಾ, ರ್‍ಯಾಲಿಗಾಗಿ ದೆಹಲಿಗೆ ಆಗಮಿಸುತ್ತಿದ್ದ ಕಾರ್ಮಿಕರ ಮೇಲೆ ಅನೇಕ ಕಡೆ ಲಾಠೀಚಾರ್ಜ್ ಮಾಡಿದ್ದನ್ನು ಉಗ್ರವಾಗಿ ಖಂಡಿಸಿದರು. ಜನವಿರೋಧಿ ಧೋರಣೆ ಅನುಸರಿಸುತ್ತಿರುವ ಕಾಂಗ್ರೆ ನೇತೃತ್ವದ ಸರಕಾರಕ್ಕೆ ಎಚ್ಚರಿಸಲು ಭಾರತದ ಕಾರ್ಮಿಕ ವರ್ಗ ಸಿದ್ಧವಾಗಿ ಬಂದಿದೆ ಎಂದರು.

ಸರಕಾರದ ಕಾರ್ಮಿಕ ವಿರೋಧಿ ನೀತಿಯನ್ನು ವಿರೋಧಿಸುವ ಘೋಷಣೆಗಳನ್ನು (ಕಾಲಾ ಕಾನೂನು ದಫನ್ ಕರೇಂಗೆ) ಕೂಗುತ್ತಾ ನಡೆದ ರ್‍ಯಾಲಿ ದೆಹಲಿ ನಾಗರಿಕರನ್ನು ಆಕರ್ಷಿಸಿತು.

ಭಾರತ್ ಬಂದ್

ರಾಷ್ಟ್ರೀಯ ಆಂದೋಲನ ಸಮಿತಿಯ ನೇತೃತ್ವದಲ್ಲಿ ಜನವರಿ 19 ರಂದು ಭಾರತ್ ಬಂದ್ ನಡೆಸಲಿರುವುದನ್ನು ಸಭೆಗೆ ತಿಳಿಸಿದಾಗ ಒಕ್ಕೊರಲಿನಿಂದ ಈ ನಿರ್ಣಯವನ್ನು ಸಭೆ ಅಂಗೀಕರಿಸಿತು. ಕರಾಳ ಕಾನೂನುಗಳನ್ನು ವಾಪಸ್ ಪಡೆಯುವವರೆಗೂ ಹೋರಾಟ ಮುಂದುವರೆಸಲು ಕಾರ್ಮಿಕರು ಪ್ರತಿಜ್ಞೆಗೈದರು.

ನಂತರ ಕೇಂದ್ರ ಕಾರ್ಮಿಕ ಸಂಘಟನೆಗಳ ಮತ್ತು ರಾಷ್ಟ್ರೀಯ ಒಕ್ಕೂಟಗಳ ಪ್ರತಿನಿಧಿಗಳನ್ನೊಳಗೊಂಡ ನಿಯೋಗವೊಂದು ರ್‍ಯಾಲಿ ಅಂಗೀಕರಿಸಿದ ನಿರ್ಣಯಗಳನ್ನೊಳಗೊಂಡ ಮನವಿಯನ್ನು ಲೋಕಸಭೆ ಸ್ಪೀಕರ್ ಮತ್ತು ರಾಜ್ಯಸಭೆ ಚೇರಮನ್‌ರಿಗೆ ಮನವಿಸಲ್ಲಿಸಿತು.

ಮುಖ್ಯ ನಿರ್ಣಯಗಳು

15ನೇ ಐ. ಎಲ್. ಸಿ. (Indian Labour Conference)ನಲ್ಲಿ ಅಂಗೀಕರಿಸಲಾದ ಜೀವನಾವಶ್ಯಕ ಕನಿಷ್ಠ ಕೂಲಿ ಆಧಾರದ ಮೇಲೆ ಕನಿಷ್ಠ ಕೂಲಿ ನಿಗದಿ ಮಾಡಬೇಕು; ಬೋನಸ್ ಕಾಯ್ದೆಯನ್ನು ತಿದ್ದುಪಡಿ ಮಾಡಬೇಕೆನ್ನುವುದು; ರಿಟ್ರೆಂಚ್‌ಮೆಂಟ್ ಮತ್ತು ಫ್ಯಾಕ್ಟರಿಗಳನ್ನು ಬಂದ್ (closur) ಮಾಡುವುದನ್ನು ನಿಷೇಧಿಸಬೇಕು; ನಿರುದ್ಯೋಗಿಗಳಿಗೆ ಭತ್ಯೆ ನೀಡಬೇಕು; ರೈತನ ಬೆಳೆಗಳಿಗೆ ನ್ಯಾಯ ಬೆಲೆ ನಿಗದಿ... ಇವುಗಳು.

ಬೋಟ್‌ಕ್ಲಬ್‌ನಲ್ಲಿ ನಡೆದ ರ್‍ಯಾಲಿಯಲ್ಲಿ ಭಾರತದ ವಿವಿಧ ರಾಜ್ಯಗಳ, ವಿವಿಧ ಭಾಷೆಗಳ ಕಾರ್ಮಿಕರು ತಮ್ಮೆಲ್ಲರನ್ನೂ ಬಾಧಿಸುತ್ತಿರುವ ಸಮಸ್ಯೆಗಳ ಕುರಿತು ಪ್ರತಿಭಟಿಸಲು ನೆರೆದಿ

(ಕಡೇ ಪುಟ ನೋಡಿ)

ಕಡಲ ತೀರದ ಮಂಗಳೂರಿನಲ್ಲಿ ನಡೆಯಲಿರುವ

"ಪಕ್ಷದ ಹನ್ನೊಂದನೇ ರಾಜ್ಯ ಸಮ್ಮೇಳನ"

ಎಂ. ಕೆ. ಭಟ್

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ ಹನ್ನೊಂದನೇ ರಾಜ್ಯ ಸಮ್ಮೇಳನವು ಕರ್ನಾಟಕ ರಾಜ್ಯದ ಕರಾವಳಿ ಪ್ರದೇಶದ ಪ್ರಮುಖ ನಗರವಾದ ಕಡಲ ತೀರದಲ್ಲಿರುವ ಮಂಗಳೂರಿನಲ್ಲಿ 1981ನೇ ಇಸವಿ ಡಿಸೆಂಬರ್ 11ರಿಂದ 14ರ ತನಕ ನಡೆಯಲಿದೆ. ಹತ್ತನೇ ರಾಜ್ಯ ಸಮ್ಮೇಳನವು 1978ನೇ ಇಸವಿ ಜನವರಿಯಲ್ಲಿ ಬೆಂಗಳೂರಿನಲ್ಲಿ ನಡೆದಿತ್ತು. ಕಳೆದ ರಾಜ್ಯಸಮ್ಮೇಳನದ ಬಳಿಕದ ಸುಮಾರು ನಾಲ್ಕು ವರ್ಷಗಳ ಕಾಲಘಟ್ಟದಲ್ಲಿ ಅಂತರ್ರಾಷ್ಟ್ರೀಯ, ರಾಷ್ಟ್ರೀಯ ಮತ್ತು ರಾಜ್ಯದ ರಾಜಕೀಯ ಪರಿಸ್ಥಿತಿಯಲ್ಲಿ ಮಹತ್ತರವಾದ ಬೆಳವಣಿಗೆಗಳಾಗಿವೆ. ಪಕ್ಷದ ಸಂಘಟನಾ ದೃಷ್ಟಿಕೋಣದಲ್ಲೂ ಬಹಳ ಪ್ರಾಮುಖ್ಯವಾದ ಬದಲಾವಣೆಗಳಾಗಿವೆ. 1982ನೇ ಇಸವಿ ಜನವರಿಯ ಕೊನೆಯಲ್ಲಿ ವಿಜಯವಾಡದಲ್ಲಿ ಸೇರಲಿರುವ ಪಕ್ಷದ ಹನ್ನೊಂದನೆ ಅಖಿಲ ಭಾರತ ಸಮ್ಮೇಳನವು ಜಲಂಧರದಲ್ಲಿ 1978ನೇ ಇಸವಿಯಲ್ಲಿ ಸೇರಿದ ಪಕ್ಷದ ಅಖಿಲ ಭಾರತ ಸಮ್ಮೇಳನದ ನಂತರದ ಅಂತರ್ರಾಷ್ಟ್ರೀಯ ಮತ್ತು ರಾಷ್ಟ್ರೀಯ ಬೆಳವಣಿಗೆಗಳು, ಜಲಂಧರ ಸಮ್ಮೇಳನದ ರಾಜಕೀಯ ನಿರ್ಣಯಗಳನ್ನು ಕಾರ್ಯಗತಗೊಳಿಸಲು ನಡೆಸಿರುವ ಪ್ರಯತ್ನ, ದೊರೆತ ಅನುಭವ ಮತ್ತು ಸಾಧನೆಗಳು, ಪಕ್ಷದ ಸಾಲ್ಕಿಯಾ ಪ್ಲೀನಂ ನಿರ್ಣಯಗಳ ಆಧಾರದಲ್ಲಿ ಸಂಘಟನೆಯನ್ನು ಬೆಳೆಸಲು ನಡೆಸಿರುವ ಪ್ರಯತ್ನ ಮತ್ತು ಸಂಘಟನಾ ಪರಿಸ್ಥಿತಿ ಹಾಗೂ ಪಕ್ಷವು ಸಾಧಿಸಿರುವ ಮುನ್ನಡೆ, ಹಿಂದಿನ ಅನುಭವ ಮತ್ತು ಇಂದಿನ ಪರಿಸ್ಥಿತಿಯ ಆಧಾರದಲ್ಲಿ ಪಕ್ಷದ ಮುಂದಿರುವ ರಾಜಕೀಯ ಮತ್ತು ಸಂಘಟನಾ ಕರ್ತವ್ಯಗಳು—ಇವನ್ನೆಲ್ಲಾ ಆಳವಾಗಿ ಚರ್ಚಿಸಿ ಸೂಕ್ತ ನಿರ್ಣಯಗಳನ್ನು ತೆಗೆದುಕೊಳ್ಳಲಿದೆ. "ಸೂಕ್ಷ್ಮವಾಗಿ ಹೇಳುವುದಿದ್ದರೆ, ಸರ್ವಾಧಿಕಾರ ಶಕ್ತಿಯನ್ನು ವಿರೋಧಿಸುವುದಕ್ಕಾಗಿ ವಿಶಾಲ ತಳಹದಿಯ ಐಕ್ಯಕಾರ್ಯಾಚರಣೆ ಮತ್ತು ಅದರೊಂದಿಗೆ ಎಡ ಪ್ರಜಾಪ್ರಭುತ್ವ ಶಕ್ತಿಗಳನ್ನು ಒಗ್ಗೂಡಿಸಿ ಪರ್ಯಾಯವನ್ನು ರೂಪಿಸುವತ್ತ ಪ್ರಯತ್ನ ಹಾಗೂ ಈ ರಾಜಕೀಯ ಕರ್ತವ್ಯಗಳನ್ನು ನೆರವೇರಿಸಲು ಸಾಧ್ಯವಾಗುವಂತೆ ಮಾಡಲು ಸಾಮೂಹಿಕ ಕ್ರಾಂತಿಕಾರಿ ಪಕ್ಷವನ್ನು ಬೆಳೆಸುವುದು"-ಈದಿಸೆಯಲ್ಲಿ ನಮ್ಮ ಪ್ರಯತ್ನ, ಅನುಭವ, ಸಾಧನೆಗಳನ್ನು ವಿಮರ್ಶಿಸಲಿದೆ.

ಮಂಗಳೂರಿನಲ್ಲಿ ಸೇರಲಿರುವ ಪಕ್ಷದ ಹನ್ನೊಂದನೆ ರಾಜ್ಯಸಮ್ಮೇಳನವು ಪಕ್ಷದ ಜಲಂಧರ ಸಮ್ಮೇಳನದ ರಾಜಕೀಯ ನಿರ್ಣಯಗಳನ್ನು ಮತ್ತು ಪಕ್ಷದ ಧೋರಣೆಗಳನ್ನು ಕಾರ್ಯಗತಗೊಳಿಸಲು ನಡೆಸಿದ ಪ್ರಯತ್ನ, ಅನುಭವ, ಸಾಧನೆಗಳನ್ನು ವಿಮರ್ಶಿಸಲಿದೆ. ಹಾಗೆಯೇ ಸಾಲ್ಕಿಯಾ ಪ್ಲೀನಂ ನಿರ್ಣಯಗಳ ಆಧಾರದಲ್ಲಿ ಮೈಸೂರಿನಲ್ಲಿ ನಡೆದ ಪಕ್ಷದ ರಾಜ್ಯ ಪ್ಲೀನಂ ನಿರ್ಣಯಗಳನ್ನು ಸಂಘಟನೆಯಲ್ಲಿ ಅಳವಡಿಸಿಕೊಳ್ಳುವುದರಲ್ಲಿ ನಾವು ನಡೆಸಿರುವ ಪ್ರಯತ್ನ ಮತ್ತು ಸಾಧಿಸಿರುವ ಪ್ರಗತಿಯ ಬಗ್ಗೆ ವಿಮರ್ಶಿಸಲಿದೆ. ಇವಿಷ್ಟೆ ಅಲ್ಲದೆ ಕರ್ನಾಟಕ ರಾಜ್ಯದ ಆರ್ಥಿಕ-ಸಾಮಾಜಿಕ-ರಾಜಕೀಯ ಪರಿಸ್ಥಿತಿಯಲ್ಲಿ ಶ್ರಮಜೀವಿ ವರ್ಗ ಮತ್ತು ಜನಸಾಮಾನ್ಯರ, ರೈತ-ಕಾರ್ಮಿಕರ ಸಮಸ್ಯೆಗಳ ಪರಿಹಾರಕ್ಕಾಗಿ ನಮ್ಮ ಪಕ್ಷವು ನಡೆಸಿರುವ ಹೋರಾಟಗಳ ಬಗ್ಗೆಯೂ ವಿಮರ್ಶಿಸಲಿದೆ. ಪಕ್ಷದ ರಾಜಕೀಯ ಧೋರಣೆಗಳನ್ನು ರಾಜ್ಯದ ಜನತೆಯ ಮಧ್ಯೆ ಕೊಂಡೊಯ್ಯುವುದರೊಂದಿಗೆ, ರಾಜ್ಯದ ವಿಶಿಷ್ಟ ಸಮಸ್ಯೆಗಳು, ದುಡಿಯುವ ಜನಕೋಟಿಯ ಸಂಕಷ್ಟಗಳು ಮತ್ತಿತರ ಸಮಸ್ಯೆಗಳ ಬಗ್ಗೆ ಸತತವಾಗಿ ವರ್ಗ ಹೋರಾಟ ಮತ್ತು ಪ್ರಜಾಪ್ರಭುತ್ವ ಚಳುವಳಿಗಳನ್ನು ಬೆಳೆಸದಿದ್ದಲ್ಲಿ ಜನತೆಯ ವಿಶ್ವಾಸವನ್ನು ಪಡೆಯುವುದು ಅಸಾಧ್ಯ. ಹಾಗೆಯೇ ನಾವು ರಾಜ್ಯದಲ್ಲಿ ಒಂದು ಪ್ರಬಲ ರಾಜಕೀಯ ಶಕ್ತಿಯಾಗಿ ಬೆಳೆಯುವುದೂ ಅಸಾಧ್ಯ. ಪಕ್ಷದ ರಾಜಕೀಯ ಧೋರಣೆಗಳನ್ನು ರಾಜ್ಯದ ಜನತೆಯ ಮಧ್ಯೆ ಕೊಂಡೊಯ್ಯುವುದು ಮತ್ತು ಜನತೆಯ ಸಮಸ್ಯೆಗಳ ಬಗ್ಗೆ ಹೋರಾಡುವುದು ಹೆಚ್ಚು ಪರಿಣಾಮಕಾರಿಯಾಗಬೇಕಾದರೆ ಪಕ್ಷದ ಸಂಘಟನೆಯಲ್ಲಿರುವ ನ್ಯೂನತೆಗಳನ್ನು ತುರ್ತಾಗಿ ಹೋಗಲಾಡಿಸಿಕೊಳ್ಳಬೇಕು. ಸಾಲ್ಕಿಯಾ ಮತ್ತು ರಾಜ್ಯ ಪ್ಲೀನಂ ನಿರ್ಣಯಗಳ ಆಧಾರದಲ್ಲಿ ರಾಜ್ಯದಲ್ಲಿ ನಮ್ಮ ಪಕ್ಷವನ್ನು ಸಾಮೂಹಿಕ ಕ್ರಾಂತಿಕಾರಿ ಪಕ್ಷವನ್ನಾಗಿ ಬೆಳೆಸಲು ಹಗಲಿರುಳೂ ಶ್ರಮಿಸಬೇಕು. ಮಂಗಳೂರಲ್ಲಿ ಸೇರಲಿರುವ ರಾಜ್ಯಸಮ್ಮೇಳನವು ಈ ದಿಸೆಯಲ್ಲಿ ಹೊಸ ಸ್ಫೂರ್ತಿ, ನವಚೈತನ್ಯ ತುಂಬುವಂತಾಗಬೇಕು.

ಪಕ್ಷದ ಕಳೆದ ಬಾರಿಯ ರಾಜ್ಯ ಸಮ್ಮೇಳನದ ಸಂದರ್ಭದಲ್ಲಿ ರಾಜ್ಯದಲ್ಲಿ ಪಕ್ಷದ ಸಂಘಟನೆ ಮತ್ತು ಅದರ ನೇತೃತ್ವದ ಸಾಮೂಹಿಕ ಸಂಘಟನೆಗಳು ಕುಸಿದು ಬೀಳುವ ಪರಿಸ್ಥಿತಿ ಉಂಟಾಗಿದ್ದಿತು. ಪಕ್ಷದ ಸಾಲ್ಕಿಯಾ ಪ್ಲೀನಂನಲ್ಲಿ ಸೂಚಿಸಲಾಗಿದ್ದ ಸಂಘಟನಾ ದೋಷಗಳೊಂದಿಗೆ ಆಗಿನ ರಾಜ್ಯ ಮುಖಂಡತ್ವದ ಪ್ರಮುಖ ವಿಭಾಗವು ಅನುಸರಿಸಿದ ತಪ್ಪು ಧೋರಣೆಗಳೂ ಸೇರಿ, ಪರಿಸ್ಥಿತಿ ತುಂಬಾ ಹಾಳಾಗಿತ್ತು. ಕಳೆದ ಬಾರಿಯ ರಾಜ್ಯಸಮ್ಮೇಳನದಲ್ಲಿ ಆಯ್ಕೆಮಾಡಿದ್ದ ರಾಜ್ಯಸಮಿತಿಯು ಕೆಲಸಮಾಡುವ ಸ್ಥಿತಿಯಲ್ಲಿರಲಿಲ್ಲ. ಅಂತಹ ಪರಿಸ್ಥಿತಿಯಲ್ಲಿ ಕೇಂದ್ರಸಮಿತಿಯು ಮಧ್ಯಪ್ರವೇಶಮಾಡಿ ರಾಜ್ಯ ಸಮಿತಿಯನ್ನು ಪುನರ್ಸಂಘಟಿಸಲಾಯಿತು. ಪ್ರಮುಖ ಸ್ಥಾನದಲ್ಲಿದ್ದ ಕೆಲವರನ್ನು ಪಕ್ಷದಿಂದ ಉಚ್ಚಾಟಿಸಲಾಯಿತು.

1978 ಜುಲೈಯಲ್ಲಿ ಪಕ್ಷದ ರಾಜ್ಯ ಸಮಿತಿಯನ್ನು ಪುನರ್ಸಂಘಟಿಸಿದ ನಂತರದ ಸುಮಾರು ಮೂರುವರೆ ವರ್ಷದ ಕಾಲಘಟ್ಟದಲ್ಲಿ ಪಕ್ಷದ ರಾಜಕೀಯ ಧೋರಣೆಗಳನ್ನು ಜನತೆಯ ಮಧ್ಯೆ ಕೊಂಡೊಯ್ಯಲು ಪ್ರಯತ್ನಿಸುವುದರೊಂದಿಗೆ ಸಂಘಟನಾತ್ಮಕವಾಗಿಯೂ ಮುನ್ನಡೆಯನ್ನು ಸಾಧಿಸಲಾಗಿದೆ. "ಇರುವ ಕಡೆ ಬಲಗೊಳಿಸಿ ಇರದೆಡೆಗೆ ಪಸರಿಸಬೇಕು" ಎಂಬ ಪ್ಲೀನಂ ನಿರ್ಣಯದಲ್ಲಿ ಎರಡು ಅಂಶಗಳಿವೆ: 1. ಇರುವ ಸಂಘಟನೆಗಳನ್ನು ಬಲಪಡಿಸಿ, ಬೇರೆ ಬೇರೆ ವಿಭಾಗದಲ್ಲಿ ಹೊಸ ಸಂಘಟನೆಗಳನ್ನು ಕಟ್ಟುವುದು 2. ಇರುವ ಪ್ರದೇಶಗಳಲ್ಲಿ ಸಂಘಟನೆಗಳನ್ನು ಬಲಪಡಿಸಿ, ಇರದ ಪ್ರದೇಶಗಳಿಗೆ ಪಸರಿಸುವುದು—ಈ ಎರಡು ಅರ್ಥದಲ್ಲಿಯೂ ಕಳೆದ ಮೂರುವರೆ ವರ್ಷಗಳಲ್ಲಿ ನಮ್ಮ ಪಕ್ಷವು ರಾಜ್ಯದಲ್ಲಿ ಪ್ರಗತಿ ಸಾಧಿಸಿದೆ ಎಂಬುದರಲ್ಲಿ ಸಂಶಯವಿಲ್ಲ. ಅನೇಕ ಇತಿಮಿತಿಗಳಿದ್ದರೂ, ಪಕ್ಷದ ಸದಸ್ಯರುಗಳು ಮತ್ತು ಕಾರ್ಯಕರ್ತರು ಹಗಲಿರುಳೆನ್ನದೆ ಶ್ರಮಿಸಿದ ಫಲವಾಗಿಯೂ, ರಾಜ್ಯಸಮಿತಿಯು ಸಾಮೂಹಿಕವಾಗಿ ನೇತೃತ್ವ ಕೊಡುವುದು ಸಾಧ್ಯವಾಗಿರುವುದರಿಂದಲೂ, ಪಕ್ಷದ ಅಖಿಲಭಾರತ ಕೇಂದ್ರದ ಮಾರ್ಗದರ್ಶನದಿಂದಲೂ ನಾವು ಪ್ರಗತಿ ಸಾಧಿಸುವುದು ಸಾಧ್ಯವಾಗಿದೆ. ಆದರೆ ನಮ್ಮಲ್ಲಿ ಇನ್ನೂ ಇರುವ ಅನೇಕ ಕೊರತೆಗಳು ಮತ್ತು ಸಂಘಟನಾ ದೋಷಗಳನ್ನು ಹೋಗಲಾಡಿಸಿಕೊಂಡರೆ ನಾವು ಇನ್ನೂ ಎಷ್ಟೋ ಹೆಚ್ಚಿನ ಪ್ರಗತಿಯನ್ನು ಸಾಧಿಸಬಹುದಿತ್ತು. ನಮ್ಮ ನ್ಯೂನತೆಗಳನ್ನು ಹೋಗಲಾಡಿಸಿಕೊಂಡು ಮುನ್ನಡೆಯುವಂತೆ ಮಾಡುವುದರಲ್ಲಿ ಡಿಸೆಂಬರ್‌ನಲ್ಲಿ ನಡೆಯಲಿರುವ ರಾಜ್ಯಸಮ್ಮೇಳನವು ನಿರ್ಣಾಯಕ ಪಾತ್ರವಹಿಸುವಂತಾಗಬೇಕು.

ನಮ್ಮ ಪಕ್ಷದ ಪ್ರಭಾವ ಹೆಚ್ಚಿದಂತೆಲ್ಲಾ ನಮ್ಮ ಸಂಘಟನೆಗಳು ಮತ್ತು ಹೋರಾಟಗಳು ಬೆಳೆದಂತೆಲ್ಲಾ ನಮ್ಮ ಮೇಲೆ ತೀವ್ರವಾದ ದಾಳಿ, ದಬ್ಬಾಳಿಕೆಗಳು ನಡೆದಿವೆ. ಸರಕಾರಿ ಯಂತ್ರದ ಉಪಯೋಗದಿಂದ ಮತ್ತು ಗೂಂಡಾಗಳನ್ನು ಉಪಯೋಗಿಸಿ ಆಡಳಿತಾರೂಢ ಕಾಂಗ್ರೆಸ್ ಪಕ್ಷವು ನಮ್ಮ ನೇತೃತ್ವದ ಹೋರಾಟಗಳನ್ನು ದಮನಗೊಳಿಸಲು ಪ್ರಯತ್ನಿಸುತ್ತಾ ಬಂದಿದೆ. ಬೆಂಗಳೂರು, ಚಿಕ್ಕಮಂಗಳೂರಿನ ಸಂಸೆ, ದಾಂಡೇಲಿ, ಹೊಸಪೇಟೆ, ರಾಯಚೂರುಗಳಲ್ಲಿ ಪೋಲೀಸರು ನಡೆಸಿರುವ ದೌರ್ಜನ್ಯ ಮತ್ತು ರೈತ–ಕಾರ್ಮಿಕ-ವಿದ್ಯಾರ್ಥಿ ಚಳುವಳಿಗಳ ಸಂದರ್ಭ ನಡೆಸಿರುವ ನರಮೇಧಗಳಿಂದ ಇದು ವಿದಿತವಾಗಿದೆ. ಕಾರ್ಮಿಕವರ್ಗದ ಹಕ್ಕುಗಳ ಮೇಲೂ, ಪ್ರಜಾಪ್ರಭುತ್ವ ಹಕ್ಕುಗಳ ಮೇಲೂ ಸತತವಾಗಿ ಆಕ್ರಮಣ ನಡೆಸಿರುವ ರಾಜ್ಯದ ಕಾಂಗ್ರೆಸ್ ಸರಕಾರದ ದುರಾಡಳಿತದ ವಿರುದ್ಧ ನಡೆಸಿರುವ ವಿಶಾಲ ತಳಹದಿಯ ಐಕ್ಯಕಾರ್ಯಾಚರಣೆಗಳ ಬಗ್ಗೆಯೂ, ಎಡ ಪ್ರಜಾಪ್ರಭುತ್ವ ಶಕ್ತಿಗಳನ್ನು ಒಗ್ಗೂಡಿಸಲು ನಡೆಸಿರುವ ಪ್ರಯತ್ನಗಳ ಬಗ್ಗೆಯೂ ವಿಮರ್ಶಿಸಿ, ನಮ್ಮ ಮುಂದಿರುವ ರಾಜಕೀಯ ಕರ್ತವ್ಯಗಳ ಬಗ್ಗೆ ರಾಜ್ಯ ಸಮ್ಮೇಳನವು ಮಾರ್ಗದರ್ಶನ ನೀಡಬೇಕು. ಹಾಗೆಯೇ ಶ್ರಮಜೀವಿ ವರ್ಗದ ಮತ್ತು ರೈತರ, ವಿದ್ಯಾರ್ಥಿ, ಯುವಜನತೆ, ಮಹಿಳೆಯರು, ದಲಿತರು, ಬೇರೆಬೇರೆ ನೌಕರ ವಿಭಾಗಗಳ ಜನರು, ಸಾಹಿತಿಗಳು, ಕಲಾವಿದರು ಮತ್ತು ಬುದ್ಧಿಜೀವಿಗಳೂ ಸೇರಿದಂತೆ ಎಲ್ಲಾ ಜನವಿಭಾಗದ ಸಮಸ್ಯೆಗಳ ಬಗ್ಗೆ ಹೋರಾಡುವುದಕ್ಕೂ ರಾಜ್ಯಸಮ್ಮೇಳನವು ಮಾರ್ಗದರ್ಶನವೀಯುವಂತಾಗಬೇಕು.

ನಮ್ಮ ಪಕ್ಷವು ಬೆಳೆದಂತೆಲ್ಲಾ, ಎಡ ಪ್ರಜಾಪ್ರಭುತ್ವ ಶಕ್ತಿಗಳ ಐಕ್ಯತೆ ಹೆಚ್ಚಿದಂತೆಲ್ಲಾ, ದುಡಿಯುವ ಜನತೆಯ ಐಕ್ಯತೆಯೂ ಹೆಚ್ಚಿದಂತೆಲ್ಲಾ ಅದನ್ನು ಹತ್ತಿಕ್ಕಲು ಛಿದ್ರಕಾರಿ ಶಕ್ತಿಗಳೂ ಪ್ರಯತ್ನಿಸುತ್ತಿವೆ. ಜಾತಿ, ಭಾಷೆ, ಧರ್ಮ, ಕೋಮು, ಸ್ಥಳೀಯ ಭಾವನೆಯಂತಹ ಸಂಕುಚಿತ ಮತ್ತು ಛಿದ್ರಕಾರಿ ವಾದಗಳ ಮೂಲಕ ಜನತೆಯ, ಶ್ರಮಜೀವಿ ವರ್ಗದ ಒಗ್ಗಟ್ಟನ್ನು ಮುರಿಯಲು ಪ್ರಯತ್ನಿಸಲಾಗುತ್ತಿದೆ. ಹಿಂದೂ ಪುನರುತ್ಥಾನವಾದ, ಮುಸ್ಲಿಂ ಮೂಲಭೂತತತ್ವದ ವಾದ, ಮತಾಂತರದ ಗೊಂದಲಗಳಿಂದ ಕಾರ್ಮಿಕವರ್ಗದ ಮತ್ತು ಜನಸಾಮಾನ್ಯರ ಐಕ್ಯತೆಯನ್ನು ಮುರಿಯುವ ಪ್ರಯತ್ನವು ರಾಜ್ಯದಲ್ಲಿ ಭಯಾನಕವಾಗಿ ಬೆಳೆಯುತ್ತಿವೆ. ಇದರೊಂದಿಗೆ ನಕ್ಸಲುವಾದಿ ಗುಂಪುಗಳು, ಟ್ರಾಟ್ಸ್ಕಿವಾದಿಗಳ ಗುಂಪುಗಳು, ಲೋಹಿಯಾವಾದಿ ಗುಂಪುಗಳು ಮತ್ತು ಎಡ ಮುಖವಾಡವನ್ನು ಹಾಕಿಕೊಂಡಿರುವ ಕ್ರಿಶ್ಚಿಯನ್ ಮಿಷನರಿ ಸಂಸ್ಥೆಗಳು ಛಿದ್ರಕಾರಿ ಕೆಲಸವನ್ನು ನಡೆಸುತ್ತಿವೆ. ಬೆಂಗಳೂರು ಇವೆಲ್ಲವುಗಳ ಚಟುವಟಿಕೆಗಳಿಗೆ ಒಂದು ಮುಖ್ಯಕೇಂದ್ರವಾಗಿದೆ. ಅವುಗಳಿಂದ ದೂರವಿರುವುದು, ಅವುಗಳ ತಪ್ಪು ಸಿದ್ಧಾಂತವನ್ನು ಬಯಲಿಗೆಳೆಯುವುದು, ಅವುಗಳನ್ನು ಜನತೆಯಿಂದ ಪ್ರತ್ಯೇಕಿಸುವಂತಹ ಕೆಲಸಗಳನ್ನು ಮಾಡಲಿಲ್ಲವಾದರೆ ಅಪಾಯವಿದೆ. ಆದುದರಿಂದ ಈ ಕೆಲಸಕ್ಕೆ ತುಂಬಾ ಆದ್ಯತೆ ಕೊಡಬೇಕಾಗಿದೆ. ಹಾಗೆಯೇ ವ್ಯವಸ್ಥೆಯ ಪರವಾಗಿರುವ ಮೌಲ್ಯಗಳನ್ನು ಮತ್ತು ಸಾಮ್ರಾಜ್ಯಶಾಹಿ ಸಂಸ್ಕೃತಿಯ ಕೆಟ್ಟ ಪ್ರಭಾವವನ್ನು ವಿರೋಧಿಸುವುದಕ್ಕಾಗಿ ಅತ್ಯಂತ ಬಿರುಸಾದ ಸೈದ್ಧಾಂತಿಕ ಹೋರಾಟವನ್ನು ನಡೆಸಬೇಕಾಗಿದೆ. ಮಾರ್ಕ್ಸ್‌ವಾದ-ಲೆನಿನ್‌ವಾದಗಳ ಆಧಾರದಲ್ಲಿ, ಕಾರ್ಮಿಕವರ್ಗದ ದೃಷ್ಟಿಕೋನದಿಂದ ಆರ್ಥಿಕ–ಸಾಮಾಜಿಕ-ಸಾಂಸ್ಕೃತಿಕ-ರಾಜಕೀಯ ಮಟ್ಟಗಳಲ್ಲಿ ಸೈದ್ಧಾಂತಿಕ ಹೋರಾಟಗಳನ್ನು ನಡೆಸುವುದಕ್ಕೆ ಮುಂದಾಗಲು ಮುಂಬರುವ ರಾಜ್ಯಸಮ್ಮೇಳನವು ದಿಕ್ಸೂಚಿಯಾಗಬೇಕು.

ಅನುಭವ, ತಿಳುವಳಿಕೆ, ಮತ್ತು ಸ್ಫೂರ್ತಿಯನ್ನು ಪರಸ್ಪರ ಹಂಚಿಕೊಂಡು, ಉಕ್ಕಿನ ಶಿಸ್ತಿನಿಂದ ಮತ್ತು ಅತ್ಯಂತ ಉನ್ನತ ಮಟ್ಟದ ತ್ಯಾಗ, ಬಲಿದಾನಗಳ ಮೂಲಕ ಪಕ್ಷದ ಸಂಘಟನೆಯ ಬಲವರ್ಧಿಸಲು ನಾವು ಮುಂದಾಗಬೇಕಾಗಿದೆ. ಸಮಯವು ತೀವ್ರಗತಿಯಲ್ಲಿ ಮುಂದೆ ಸಾಗುತ್ತಿದೆ. ಘಟನೆಗಳೂ ನಮ್ಮನ್ನು ಕಾಯದೆ ಮುನ್ನುಗ್ಗುತ್ತಿವೆ. ಸಮಯ ಮತ್ತು ಘಟನೆಗಳಿಗೆ ನಾವು ಹಿಂದೆ ಬೀಳದೆ, ಅವನ್ನು ನಿಯಂತ್ರಿಸಿಕೊಂಡು ಮುನ್ನಡೆಯುವಂತಾಗಬೇಕಾದರೆ ಅತ್ಯಂತ ಕ್ಷಿಪ್ರ ಸಮಯದಲ್ಲಿ ಬಲಶಾಲಿಯಾದ ಸಾಮೂಹಿಕ ಕ್ರಾಂತಿಕಾರಿ ಪಕ್ಷವನ್ನು ಬೆಳೆಸಲೇಬೇಕು. ಪಕ್ಷದ ಹನ್ನೊಂದನೆ ರಾಜ್ಯಸಮ್ಮೇಳನವನ್ನು ಅತ್ಯಂತ ಯಶಸ್ವಿಗೊಳಿಸಲು ಶ್ರಮಿಸುವುದರೊಂದಿಗೆ ನಮ್ಮ ಕ್ರಾಂತಿಕಾರಿ ಕರ್ತವ್ಯಗಳನ್ನು ನಿರ್ವಹಿಸಲು ಮುಂದಾಗೋಣ. ರಾಜ್ಯಸಮ್ಮೇಳನವು ನಡೆಯಲಿರುವ ಈ ಸಂದರ್ಭದಲ್ಲಿ ಪಕ್ಷದ ಧೋರಣೆಗಳ ಬಗ್ಗೆ ರಾಜ್ಯದಾದ್ಯಂತ ಪ್ರಚಾರ, ಪ್ರಕ್ಷೋಭೆಗಳನ್ನು ನಡೆಸುವುದರ ಮೂಲಕವೂ, ಸಮ್ಮೇಳನದ ಕೊನೆಯ ದಿನ ಅತ್ಯಂತ ದೊಡ್ಡ ಪ್ರಮಾಣದಲ್ಲಿ ನಮ್ಮ ಸಂಘಟನಾ ಶಕ್ತಿಯನ್ನು ಪ್ರದರ್ಶಿಸುವುದರ ಮೂಲಕವೂ ರಾಜಕೀಯವಾಗಿ ಪರಿಣಾಮ ಬೀರಲು ಎಲ್ಲರೂ ಮುಂದಾಗೋಣ.

●

ಚಂದಾ ವಿವರ

ಬಿಡಿ ಪ್ರತಿ	: 60ಪೈಸೆ
6 ತಿಂಗಳಿಗೆ	: 15ರೂ.
ವಾರ್ಷಿಕ ಚಂದಾ	: 30ರೂ.

ಕರ್ನಾಟಕ ರಾಜ್ಯದಲ್ಲಿ ಬಂಡೇಕಲ್ಲು ಸರಕಾರಕ್ಕೂ ತೂತುಬಿತ್ತೇ?

-ಎನ್ಕೆ

ಗುಂಡದೆಯ ಗುಂಡೂರಾಯರು ಭದ್ರವಾದ ತನ್ನ ಸರಕಾರವೆಂದು ಹೆಗ್ಗಳಿಕೆಯ ಭಾಷಣಮಾಡುತ್ತ ಉತ್ತರ ಕರ್ನಾಟಕದಲ್ಲಿ ಮೆರೆಯುತ್ತಿದ್ದಂತೆಯೇ ಬಂಡೇಕಲ್ಲಿಗೇ ತೂತು ತೆಗೆಯುವ ಹವ್ಯಾಸಿ ಘಟನೆಗಳು ರಾಜ್ಯದಲ್ಲಿ ನಡೆದಿವೆ. ಭೀಕರ ಜಲಪಾತಕ್ಕಾಗಲೀ ಬೋರ್ಗರೆಯುವ ಮಳೆಗಾಗಲೀ ಬಂಡೇಗಲ್ಲು ಅಲುಗಾಡುವುದಿಲ್ಲ, ಸವೆಯುವುದಿಲ್ಲ, ಪರಿಣಾಮಗಳಾಗುವುದಿಲ್ಲ. ಭೂಕಂಪದಿಂದ ಮಾತ್ರ ಅದು ಸ್ಥಾನ ಬದಲಾಯಿಸಬಹುದಾಗಿದೆ.

ಗುಂಡೆದೆಯ ಗುಂಡೂರಾಯರಿಗೆ ಹೆದ್ದಾರಿ ದರೋಡೆಖೋರರ ಆಹ್ವಾನ. ನೆಲಮಂಗಲ ಮತ್ತಿನ್ನಿತರ ಕಡೆಗಳಲ್ಲಿ ಕಾರು, ಟ್ರಕ್, ಬಸ್‌ಗಳನ್ನು ತಡೆದು ನಡುರಾತ್ರಿಯಲ್ಲಿ ದರೋಡೆ ನಡೆದಿದೆ. ಆಳುವ ಕಾಂಗ್ರೆಸ್ಸಿನವರು ಚುನಾವಣೆಯಲ್ಲುಪಯೋಗಿಸುವ ಖೋಟಾ ನೋಟಿನ ಉದಯವಾಗಿದೆ ಧಾರವಾಡ ಜಿಲ್ಲೆಯ ಬ್ಯಾಂಕುಗಳಲ್ಲಿ. ಕಣ್ಣು ತೆರೆದು ಬೆಳಕು ಕಂಡ ಮಕ್ಕಳು ಕಾಂಗ್ರೆಸ್ ಆಳ್ವಿಕೆಯ ವಿಷಗಾಳಿಯಿಂದಾಗಿ ಬೇದಿ ತೀವ್ರ ಮುಕ್ತಿಪಡೆಯುವ ಉದ್ದೇಶದಿಂದ, ಮೆದುಳು ಜ್ವರಕ್ಕೆ ಬಲಿಯಾಗುತ್ತಿದ್ದಾರೆ. ವಿಚಾರಣೆಗೆಂದು ಪೋಲೀಸರು ಕೊಂಡೊಯ್ದ ವ್ಯಕ್ತಿಗಳು ಪೋಲೀಸ ಸ್ಟೇಶನಿನಲ್ಲೇ ನಾಪತ್ತೆಯಾಗಿಪೆಂಬ ದೂರು ಹೈಕೋರ್ಟಿನಲ್ಲಿ ದಾಖಲಾಗಿದೆ. ಪೋಲೀಸರ ಹೇಳಿಕೆ ಪ್ರಕಾರ ತ್ರಿವೇಣಿ ಹೋಟೆಲಿಗೆ ಕಲ್ಲು ಒಗೆದಿದ್ದ, ಅವರ ಒತ್ತಾಯಕ್ಕೆ ಮಣಿದು ಹೋಟೆಲ ಮಾಲೀಕರ ವಿರುದ್ಧ ವಿಜಾಪುರ ಕೋರ್ಟಿನಲ್ಲಿ ಖಟ್ಲೆ ದಾಖಲು ಮಾಡಿದ್ದ, ನನಗೆ ಪೋಲೀಸರ ಅತ್ಯಾಚಾರದ ವಿರುದ್ಧ ರಕ್ಷಣೆ ಸಿಗಬೇಕೆಂಬ ದೂರನ್ನು ಹೈಕೋರ್ಟಿನಲ್ಲಿ ದಾಖಲು ಮಾಡಿದವ ದಾಜುದ್ದೀನ. ಪುನರ್ನಿವೇಶನಕ್ಕಾಗಿ ಜೀತದಾಳುಗಳ ಹೋರಾಟ, ವೈದ್ಯಕೀಯ ಶಿಕ್ಷಣದ ಸ್ನಾತಕೋತ್ತರ ಮತ್ತು ಡಿಪ್ಲೋಮಾ ಕೋರ್ಸುಗಳಿಗೆ ಪ್ರವೇಶ ಪಡೆಯಲು ವಿಳಂಬವಾಗಿ ಅಭ್ಯಾಸಕ್ಕೆ ಸಂಚಕಾರವೆಂದು ವಿದ್ಯಾರ್ಥಿಗಳ ಆಕ್ಷೇಪ.-ಹೀಗೆ ರಾಜ್ಯಾದ್ಯಂತ ಬಹುಮುಖದ ಹೋರಾಟಗಳು ನಡೆಯುತ್ತಿರುವಾಗ ಭದ್ರ ಸರಕಾರದ ಮಂತ್ರಿಗಳ ಸಂಚಾರ, ಆಶ್ವಾಸನೆಗಳ ಸುರಿಮಳೆಯೇ ಸುರಿಮಳೆ. ಇದರ ಒಳಗುಟ್ಟೇನು? 1983 ಫೆಬ್ರವರಿ-ಮಾರ್ಚ್ ತಿಂಗಳಲ್ಲಿ ನಮ್ಮ ರಾಜ್ಯದ ವಿಧಾನ ಸಭೆ ಚುನಾವಣೆ ನಡೆಯಬೇಕಾಗಿದೆ. ಆದರೆ ಚುನಾವಣಾಧಿಕಾರಿಗಳು ಇದೇ ತಿಂಗಳಲ್ಲಿ ಮತದಾರರ ಯಾದಿಯನ್ನಷ್ಟೇ ಅಲ್ಲ, ಮತಗಟ್ಟೆಗಳನ್ನೂ ಪ್ರಕಟಿಸಿ ತಕರಾರುಗಳನ್ನು ಆಹ್ವಾನಿಸಿದ್ದಾರೆ. ಇದರರ್ಥವೇನು? ಜನಗಣತಿಯ ವರದಿ ಪ್ರಕಟವಾಗಿಲ್ಲ. ಅದರಂತೆ ಮತದಾರರ ಯಾದಿ ತಯಾರಿಲ್ಲ. ಆದಾಗ್ಯೂ ಈ ಅವಸರದ ಕ್ರಮವೇಕೆ? ಇಂದಿರಾಗಾಂಧಿ ಉಸಿರಾಡುತ್ತಿರಬೇಕು. ಆ ಉಸಿರಿನಿಂದ ಗುಂಡೂರಾಯರ ಬಂಡೇಕಲ್ಲು ಸರಕಾರಕ್ಕೂ ತೂತು ಬೀಳುವ ಸಂಭವವೇ? ಕಾದು ನೋಡೋಣ.

ಸರಕಾರದ ಯೋಜನೆಗಳು ವಿಫಲ

ಸಮಾಜದಲ್ಲಿ ನಿರ್ಲಕ್ಷಿಸಲ್ಪಟ್ಟ ದುರ್ಬಲರನ್ನು ಬಡತನರೇಖೆಯಿಂದ ಮೇಲೆ ತರಲು ಸರಕಾರ ವಿವಿಧ ಕಾರ್ಯಕ್ರಮಗಳನ್ನು ಹಾಗೂ ಯೋಜನೆಗಳನ್ನು ಹಾಕಿಕೊಂಡರೂ ಅವು ನಿರೀಕ್ಷಿತ ಮಟ್ಟದಲ್ಲಿ ಪ್ರತಿಫಲ ನೀಡಿಲ್ಲವೆಂದು ಹೇಳಿದವರು ಎಂ. ಕೆ. ಭಟ್ಟರೂ ಅಲ್ಲ, ದೇವರಾಜ ಅರಸರೂ ಅಲ್ಲ. ಅತಿ ಕಡಿಮೆ ವೇಳೆಯ ಆಡಳಿತೆಯಲ್ಲಿ ಅತಿ ಹೆಚ್ಚು ಸಾರ್ವಜನಿಕ ಕೆಲಸ ಮಾಡಿತೋರಿಸಿದ್ದೇನೆಂದು ಭುಜ ತಟ್ಟಿಕೊಳ್ಳುವ ಗುಂಡೂರಾವ್ ಮಂತ್ರಿಮಂಡಲದ ಮಂತ್ರಿಯಾದ ಆಹಾರ ಮತ್ತು ನಾಗರಿಕ ಶಾಖೆ ಸಚಿವ ಮಾಣಿಕರಾವ್ ಪಾಟೀಲ್.

ಜನರ ದಿನನಿತ್ಯ ಜೀವನ ಸುಗಮವಾಗಿ ಸಾಗುವಂತೆ ವ್ಯವಸ್ಥೆ ರೂಪಿಸಲು ಸರಕಾರಕ್ಕಿರುವ ಸಾಮರ್ಥ್ಯವೇ ಅದರ ದಕ್ಷತೆಯ ಒರೆಗಲ್ಲೆಂದು ಹೇಳಿದರೆ ತಪ್ಪೇನಿಲ್ಲ. ಕೋಟ್ಯಾವಧಿ ರೂಪಾಯಿ ಖರ್ಚುಮಾಡಿ ಸಾವಿರಾರು ಯೋಜನೆಗಳನ್ನು ಕೈಗೊಂಡರೂ ಕೂಡ ಅವು ಅಪೇಕ್ಷಿತ ಫಲ ಯಾಕೆ ನೀಡುತ್ತಿಲ್ಲವೆಂಬುದಕ್ಕೆ ಮಂತ್ರಿ ಮಾಣಿಕರಾವ್ ಪಾಟೀಲರೇ ಉತ್ತರಿಸಿದರೆ ಯೋಗ್ಯವಲ್ಲವೇ. ಶಿವಮೊಗ್ಗ ಜಿಲ್ಲೆಯ ಸಾವಿರಾರು ಜೀತದಾಳುಗಳ ಪುನರ್ವಸತಿಗಾಗಿ ಲಕ್ಷಾವಧಿ ರೂಪಾಯಿ ತೆಗೆದಿಟ್ಟಿರುವುದಾಗಿ ಜೂನ್ ತಿಂಗಳಲ್ಲೇ ಸರಕಾರಿ ಪ್ರಕಟಣೆ ಹೊರಟಿತ್ತು. ಒಬ್ಬ ವ್ಯಕ್ತಿಗೂ ಒಂದು ನಯಾಪೈಸೆಯ ಸಹಾಯ ಸಿಗಲಿಲ್ಲ. ಯಾಕೆ? ಹಣ ಎಲ್ಲಿ ಮಂಗಮಾಯವಾಯಿತು. ಇನ್ನೊಂದು ತಿಂಗಳೊಳಗೆ 43 ಸಾವಿರ ಮನೆಗಳನ್ನು ಹಂಚುವುದಾಗಿ ಧರ್ಮಸಿಂಗ್ ಸಾರಿದ್ದಾರೆ. ದುರ್ಬಲ ವರ್ಗಕ್ಕೂ ಈ ಮನೆಗಳಿಗೂ ನಂಟಿಲ್ಲ. ಈಗಾಗಲೇ ಮನೆಗಳಿದ್ದವರಿಗೇ ಮತ್ತೆ ಮನೆಗಳ ವಿೂಸಲು. ಇದನ್ನೆಲ್ಲ ಸರಿಪಡಿಸುವುದು ಕಷ್ಟದಾಯಕವೇ? ಅಲ್ಲ. ಆದರೆ ಮಾಣಿಕರಾವ್ ಸರಕಾರದ ವರ್ಗಗುಣಕ್ಕನುಸಾರವಾಗಿ ಎಲ್ಲಾ ಕೆಲಸ ಆಗುತ್ತಿದೆ; ಪ್ರತಿಫಲ ದೊರೆಯುತ್ತಿದೆ. ಆದರದು ದುರ್ಬಲರಿಗೂ ಬಡವರಿಗೂ ಅಲ್ಲ.

ಮಾಣಿಕರಾವ್ ಪಾಟೀಲರ ಆಹಾರ ಮತ್ತು ನಾಗರಿಕ ವಿತರಣ ವ್ಯವಸ್ಥೆಯನ್ನೇ ನೋಡುವಾಗ ಈ ಮಹಾಶಯರು ಸಾರ್ವಜನಿಕ ಸಭೆಗಳಲ್ಲಿ ಎಂಥ ಡಂಬಾಚಾರದ ಮಾತುಗಳನ್ನಾಡುತ್ತಾರೆಂಬುದು ಸ್ಪಷ್ಟ.

ಸೀಮೆಎಣ್ಣೆ, ಪಾಮಎಣ್ಣೆ, ಗೋದಿ, ಜೋಳ, ಅಕ್ಕಿ, ರವೆ-ಎಲ್ಲವೂ ಸಾಕಷ್ಟಿದೆ. ನಾಗರಿಕರಿಗೆ ಬೇಕಾದಷ್ಟು ಪೂರೈಸುತ್ತೇವೆ. ಯಾವದೇ ಭಯ ಬೇಡವೆಂದು ಹೇಳುವವರು ಮಂತ್ರಿಗಳು ಮತ್ತು ನಾಗರಿಕ ಸರಬರಾಜು ಅಧಿಕಾರಿಗಳು. ಆದರೆ ಯಾವ ವಸ್ತು ನಾಗರಿಕರಿಗೆ ಸರಿಯಾಗಿ ಸಿಗುತ್ತಿಲ್ಲ, ಬಹಿರಂಗ ಪೇಟೆಯ ಶೆಟ್ಟಿಗಳ ಆಶಯವೇ ಅವರಗತಿ ಎಂಬ ದಾರುಣ ದೃಶ್ಯವನ್ನು ರಾಜ್ಯಾದ್ಯಂತ ನೋಡುತ್ತೇವೆ. ಸೀಮೆಎಣ್ಣೆ, ಪಾಮಎಣ್ಣೆಗಳು ಸರಕಾರಿ ಗೋದಾಮುಗಳಿಂದ ನೇರವಾಗಿ ಖಾಸಗಿ ಎಣ್ಣೆ ಅಂಗಡಿ ಸೇರುತ್ತದೆ. ಯಾರೂ ತಡೆಯುವವರಿಲ್ಲ. ಇತರ ವಸ್ತುಗಳನ್ನು ಗೋದಾಮುಗಳಿಂದ ಒದಗಿಸುತ್ತಿಲ್ಲ. ಕೇಳಿದರೆ ಸ್ಟಾಕಿಲ್ಲ; ಸಾಕಷ್ಟು ಸ್ಟಾಕಿದೆಂದು ಮಂತ್ರಿಗಳು ಸಾರಿದರೆ ಗೋದಾಮುಗಳಲ್ಲಿ ಖಾಲಿ. ಗ್ರಾಹಕ ವಸ್ತುಗಳನ್ನು ಮನೆಬಾಗಿಲಲ್ಲೇ ಪೂರೈಸಲಾಗುವುದೆಂಬ ಹೇಳಿಕೆಯನ್ನಾದರೂ ಮಾಣಿಕರಾವ್ ಪಾಟೀಲರು ನಿಜಗೊಳಿಸಿದರೆ ಸಾಕು. ಆದರೆ ಬಂಡವಾಳದಾರರ, ಕಾಳಸಂತೆಖೋರರ ಆಶ್ರಯಲ್ಲಿ ಬಾಳಿ ಬದುಕುವ ಈ ಸರಕಾರದಿಂದ ಅದೆಲ್ಲ ಸಾಧ್ಯವೇ? ಜನತೆ ಎದ್ದೇಳಬೇಕು, ಹೋರಾಡಬೇಕು. ಸರಕಾರಿ ಯೋಜನೆಗಳ ವೈಫಲ್ಯದಿಂದ ನಿರಾಶರಾದ ಮಾಣಿಕರಾವ್ ಪಾಟೀಲರೂ ತಮ್ಮ ಕುರ್ಚಿಬಿಟ್ಟು ಚಳುವಳಿಯಲ್ಲಿ ಪಾಲ್ಗೊಳ್ಳಬೇಕು.

ಬಸವಲಿಂಗಪ್ಪ ಬಾಯಿಬಿಟ್ಟರು

ನಮ್ಮ ದೇಶದ ಜನರ ಸಹನಾಶಕ್ತಿ ಕೆಲವು ರಾಜಕೀಯ, ಸ್ವಾರ್ಥ ಪುಢಾರಿಗಳಿಗೆ ಬಾಯಿಬಂದಂತೆ ಬೊಗಳುವ ಅವಕಾಶ ನೀಡುತ್ತಿದೆ. ಅಧಿಕಾರವಿಲ್ಲದೆ ನಾನ್ ಬಾಳಲಾರೆ ಎಂಬೋದೇ ಕ್ಯಾನ್ಸರ್ ರೋಗಕ್ಕೆ ತುತ್ತಾದವರ ಪೈಕಿ ಮಾಜಿ ಮಂತ್ರಿ ಬಸವಲಿಂಗಪ್ಪನವರೊಬ್ಬರು. ತನ್ನ ಅಧಿಕಾರ ದಾಹಕ್ಕೆ ಮಹಾರಾಷ್ಟ್ರದ ಕಾಂಗ್ರೆಸ್(ಎಸ್)ನ್ನು ಬಲಿಕೊಟ್ಟು ಕೇಂದ್ರದಲ್ಲಿ ಮಂತ್ರಿಯಾಗಿ ಮೆರೆಯಬೇಕೆಂಬ ಹಗಲು ಕನಸು ಕಂಡ ಯಶವಂತರಾವ್ ಚವ್ಹಾಣರು ತಮ್ಮ ಗುಳಿಗೆಯನ್ನು ತಾವೊಬ್ಬರೇ ನುಂಗಿದಂತಾಗಿ ತ್ರಿಶಂಕಾವಸ್ಥೆಯಲ್ಲಿದ್ದಾರೆ. ತಮ್ಮ ಫಂಡರೀ ಭಜನೆಯಿಂದ ಮಹಾಕಾಳಿಯ ಮನವೊಲಿಸುವಲ್ಲಿ ಜಯಗಳಿಸಿಲ್ಲ.

ಕರ್ನಾಟಕದಲ್ಲಿ ಹಿಂದುಳಿದವರ ಅಂಬೇಡ್ಕರ್ ಅವತಾರವೆಂದೆನ್ನಿಸಿಕೊಳ್ಳಲು ಪ್ರಯತ್ನ ನಡೆಸಿ, ಕನ್ನಡ ಸಾಹಿತ್ಯವನ್ನೆಲ್ಲಾ ಬೂಸದ ಬುಟ್ಟಿಗೊಗೆದು, ಅದರ ಪ್ರಭಾವಿ ಹೊಗೆಯಿಂದಾಗಿ ತನ್ನ ಮಂತ್ರಿ ಸ್ಥಾನವನ್ನು ತ್ಯಜಿಸಿ, ಅರಸ್ ಮಂತ್ರಿಮಂಡಲ ರಾಜೀನಾಮೆ ಕೊಟ್ಟನಂತರವೂ ಅರಸರ ಬೆಂಬಲಿಗರಾಗಿಯೇ ಉಳಿದಿದ್ದ ಬಸವಲಿಂಗಪ್ಪನವರು ಯಶವಂತರಾವ್ ಚವಾಣರಂತೆಯೇ ಅಮ್ಮಾವ್ರ ಆಶೀರ್ವಾದ ಗುಂಡೂರಾಯರ ಮೂಲಕ ಸಿಗಬಹುದೆಂಬ ಮಹದಾಸೆಯಿಂದ ಅರಸರನ್ನು ಬಿಟ್ಟು ರಾಯರ ಗುಂಡಿ ಸೇರಿದ್ದರು. ಆದರೆ ಫಲಪ್ರಾಪ್ತಿಯಾಗಲಿಲ್ಲ. ಫಲವಿಲ್ಲದೆ ನಿದ್ದೆ ಬರಬೇಕಲ್ಲ? ವಿಶ್ವಾಮಿತ್ರನ ತಪಸ್ಸನ್ನು ಭಂಗಗೊಳಿಸಲು ಕೊನೆ ಕೊನೆಗೆ ಮೇನಕೆ ತನ್ನ ಕಾಲ್ಗೆಜ್ಜೆಯ ಮಧುರ ನಾದವನ್ನೂ ವ್ಯಮಾಟವನ್ನೂ ಕೊನೆಯುಕಕ್ಕೇರಿಸಿದಂತೆಯೇ ಬಸವಲಿಂಗಪ್ಪನವರು ಮೇನಕೆಯ ಹೆಜ್ಜೆಯನ್ನಿಡಲು ಪ್ರಾರಂಭಿಸಿದ್ದಾರೆ.

ಹಿಂದಿನ ಮುಖ್ಯಮಂತ್ರಿಗಳು ಗುಂಡೂರಾವ್ ಹಾಗೂ ಎಫ್. ಎಂ. ಖಾನ್ ಅವರ ರಾಜಕೀಯ ಜೀವನವನ್ನು ಮೊಟಕುಗೊಳಿಸಲು ಪ್ರಯತ್ನಿಸಿದ್ದರು. ತಾನು ಉಪಾಯ ಮಾಡಿ ಅದು ಆಗದ ಹಾಗೆ ನೋಡಿಕೊಂಡೆನೆಂದೂ, ಕಳೆದ ಲೋಕಸಭಾ ಚುನಾವಣೆಯಲ್ಲಿ ತಾನು ಇನ್ನೊಂದು ಕಾಂಗ್ರೆಸ್‌ಪಕ್ಷದಲ್ಲಿದ್ದರೂ ಚುನಾವಣಾ ಪ್ರಚಾರಕ್ಕೆ ಸುಮ್ಮನೆ ಬಂದ ಹಾಗೆ ಮಾಡಿದೆಂದು ಬಸವಲಿಂಗಪ್ಪನವರು ಗುಂಡೂರಾಯರ ಸಮಕ್ಷಮ ನಾಚಿಕೆಗೇಡಿ ಮಾತನ್ನಾಡಿದರು. ಬಸವಲಿಂಗಪ್ಪನವರ ಗ್ರಹಚಾರ ಬಲ ಚೆನ್ನಾಗಿಲ್ಲೆಂಬ ಚಟಾಕಿ ಗುಂಡೂರಾಯರಿಂದ ಹಾರಿತಲ್ಲದೆ ತಮ್ಮನ್ನು ಬಚಾವ್ ಮಾಡಿದ ನಾವಿಗನಿಗೆಂಥ ಬಕ್ಷೀಸ್ ಕೊಡಲಾಗುವುದೆಂಬುದನ್ನು ರಾಯರ ನಾಲಿಗೆ ನಡಿಯಲಿಲ್ಲ. ಬಸವಲಿಂಗಪ್ಪನವರೇ ಚಂದ್ರೇಗೌಡನ್ನು ಮುನ್ನುಗ್ಗುತ್ತಿದ್ದಾರೆ ಎಚ್ಚರಿಕೆ! ಹಾಯ್ ನಾವೆಂಥ ರಾಜಕಾರಣಿಗಳ ಮಧ್ಯೆ. ಜನಶಕ್ತಿ ಬೆಳೆಯಲಿ, ಶುದ್ಧ ಆಳಿಕೆ ಉದಯವಾಗಲಿ.

ಕೆಂಪೇಗೌಡ ಆಯೋಗದ ವರದಿ

ಇತ್ತೀಚಿನ ವರ್ಷಗಳಲ್ಲಿ ಪ್ರಥಮ ಸಲ ವಿಚಾರಣಾ ಆಯೋಗ ಒಂದು ಸರಕಾರಿ ಅಧಿಕಾರಿಗಳ ವಿರುದ್ಧ ಕಠೋರ ವರದಿ ಸಲ್ಲಿಸಿದೆ. ಸರಕಾರ ಆ ವರದಿಯನ್ನೊಪ್ಪಿಕೊಂಡಿದೆ.

ಕರ್ನಾಟಕ ರಾಜ್ಯದಲ್ಲಿ, ರೈತ-ಕಾರ್ಮಿಕರ ಸಂಯುಕ್ತ ಹೋರಾಟಕ್ಕೆ ನಾಂದಿ ಹಾಕಿ ನರಗುಂದ-ನವಲಗುಂದ ಪ್ರಕರಣದ ವಿಚಾರಣೆಗಾಗಿ ಸರಕಾರ ಕೆಂಪೇಗೌಡ ಆಯೋಗ ನೇಮಿಸಿತ್ತು. "ಇನ್ನು ಮುಂದೆ ಇಂತಹ ಸಂದರ್ಭಗಳಲ್ಲಿ ಪರಿಸ್ಥಿತಿಯನ್ನು ಮುಂದಾಲೋಚಿಸಿ ಕಾನೂನು-ಶಾಂತಿ ಪರಿಪಾಲನೆ ಕಡೆಗೆ ಗಮನ ನೀಡಿ ನಿಮ್ಮ ಕರ್ತವ್ಯ ನಿರ್ವಹಿಸಿ" ಕೆಂಪೇಗೌಡ ಆಯೋಗದ ಕಿವಿ ಮಾತು ಅಧಿಕಾರಿಗಳಿಗೆ. ತಹಶೀಲದಾರರು 'ಚಳುವಳಿ ಹೂಡಿದ್ದ ರೈತರ ಜೊತೆ ಮಾತಾಡಿ ಮನ ಒಲಿಸಿದ್ದರೆ ಅಂಥ ಘಟನೆ ತಪ್ಪಿಸಬಹುದಿತ್ತೆಂದೂ, ರೈತರ ಚಳುವಳಿ ಸ್ವರೂಪ ಗಮನಿಸದಿದ್ದುದರಿಂದ ಸಾಕಷ್ಟು ರಕ್ಷಣಾ ವ್ಯವಸ್ಥೆ ಮಾಡಿಕೊಂಡಿಲ್ಲ, ಇದು ಅವರ ಅಧಕ್ಷತನವೆಂದೂ ಹೇಳಿದೆ.

1976-77ರಲ್ಲಿ ಮಾತ್ರ ಆ ಪ್ರದೇಶದ ರೈತರಿಗೆ ನೀರಿನ ಸೌಲಭ್ಯ ದೊರಕಿಸಲಾಗಿತ್ತು. ನೀರು ಸರಬರಾಜು ಆಗುವ ಮೊದಲೇ ನೀರು ಸರಬರಾಜು ಆಗಿದೆಂದು ತೆರಿಗೆ ಹಾಕಲಾಗಿದೆ. ಅಭಿವೃದ್ಧಿ ತೆರಿಗೆ, ನೀರು ತೆರಿಗೆ ಕುರಿತು ನೀರಾವರಿ, ಅಭಿವೃದ್ಧಿ ತೆರಿಗೆ ಅಧಿಕಾರಿ ಹಾಗೂ ತಹಶೀಲ್ದಾರರು ಕೈಕೊಂಡ ಕ್ರಮಗಳ ಬಗ್ಗೆ ರೈತರು 1976ರಿಂದಲೇ ಅತೃಪ್ತಿಗೊಂಡಿದ್ದರೂ ಅದನ್ನು ನಿವಾರಿಸಲು ಅಧಿಕಾರಿಗಳಾಗಲೀ, ಸರಕಾರವಾಗಲೀ ಮುಂದೆ ಬಂದಿಲ್ಲೆಂಬ ಸ್ಪಷ್ಟ ಅಭಿಪ್ರಾಯ ಆಯೋಗ ವ್ಯಕ್ತಮಾಡಿದೆ.

ಈ ವರದಿಯನ್ನೊಪ್ಪಿಕೊಂಡ ರಾಜ್ಯಸರಕಾರ ಮೇಲಧಿಕಾರಿಗಳ ಮೇಲೆ ಉಗ್ರಕ್ರಮ ಕೈಗೊಳ್ಳುವುದನ್ನು ಬಿಟ್ಟು ಬರೇ ಎಚ್ಚರಿಕೆ ನೀಡಿದ್ದು ಸಾಲದು. ಜಿಲ್ಲಾಧಿಕಾರಿಗಳ ಜೊತೆಯಲ್ಲೇ ವಿಧಾನಸೌಧದಲ್ಲಿಯ ಸಂಬಂಧಪಟ್ಟ ಕಾರ್ಯದರ್ಶಿಗಳೂ, ಮಂತ್ರಿಗಳೂ ಹಾಗೆಯೇ ಆ ಭಾಗದ ವಿಧಾನಸಭೆ ಸದಸ್ಯರೂ ಈ ಅವಾಂತರಕ್ಕೆ ಕಾರಣೀಭೂತರು. ಇದನ್ನೆಲ್ಲ ಗಮನಕ್ಕೆ ತೆಗೆದುಕೊಳ್ಳುವುದು ಗಂಭೀರ ಆಡಳಿತೆ ನಡೆಸುವಯಾವುದೇ ಸರಕಾರದ ಆದ್ಯ ಕರ್ತವ್ಯ. ಮಂತ್ರಿಗಳನ್ನೂ, ವಿಧಾನಸಭಾ ಸದಸ್ಯರನ್ನೂ (ಇವರಿಗೆಲ್ಲ ರೈತರು ನೂರಾರು ಮನವಿಗಳನ್ನು ಸಲ್ಲಿಸಿದ್ದರು) ವಿಧಾನಸೌಧದ ಅಧಿಕಾರಿಗಳನ್ನೂ ಮುಟ್ಟದೆ, ಜಿಲ್ಲಾಧಿಕಾರಿಗಳಿಗೆ ಬರೇ ಎಚ್ಚರಿಕೆ ನೀಡಿ ಈ ಘಟನೆಯನ್ನಿಲ್ಲೇ ಮುಚ್ಚಿಟ್ಟರೆ ತಮ್ಮ ಜೀವನವನ್ನೇ ಬಲಿಕೊಟ್ಟ ನರಗುಂದದ 5 ರಾಷ್ಟ್ರದ ಇತರ ಕಡೆಗಳ 47 ಹುತಾತ್ಮರಿಗೆ ಅನ್ಯಾಯ ಮಾಡಿದಂತಾಗುತ್ತದೆ. ಇಡೀ ಮಂತ್ರಿಮಂಡಲವೇ ಈ ಅನಾಹುತದ ಜವಾಬ್ದಾರಿ ಹೊತ್ತುಕೊಳ್ಳುವುದು ಅತ್ಯಗತ್ಯ.

(6ನೇ ಪುಟ ನೋಡಿ)

ಕಥೆ

ದೂರದ ತಾರೆಗಳು

–ಲೀ ಮಿಂಗ್ ಖ್ಯುಯಿ

(ಹಿಂದಿನ ಸಂಚಿಕೆಯಿಂದ)

ಹಾಗಾದರೆ ಈ ರಾತ್ರಿ ನಮ್ಮ ರಸ್ತೆಯ ಮೇಲೆ ಹೋಗಬೇಕು. ಯಥಾಪ್ರಕಾರ...

ಗುಡ್ಡದ ಮೇಲೆ ಬಿದ್ದ ಬಾಂಬ್ ಸಿಡಿಸುವುದು ನನ್ನ ಪಾಲಿನ ಕಾರ್ಯ. ರಸ್ತೆಯ ಮೇಲಿನ ಎರಡು ಬಾಂಬ್‌ಗಳ ಹೊಣೆಗಾರಿಕೆ ನೊಗೆ. ಹಳೆಯ ಅರ್ಧಗಟ್ಟು ಒಂದರ ಸಮೀಪ ಬಿದ್ದುದು ಥಅ ಪಾಲಿಗೆ.

ನೀರವವಾದ ಮರಳುಗಾಡು. ಮೈಯಲ್ಲಿ ನಡುಕ ಹುಟ್ಟಲು ಸಾಕು. ಅಲ್ಲೊಂದು ಇಲ್ಲೊಂದು ಟೊಂಗೆಗಳಿಲ್ಲದ ಬೆತ್ತಲೆ ಕಾಂಡಗಳು. ಮಣ್ಣು ಬಿಸಿಯಾಗಿದೆ. ಹೊಗೆಯ ಮೋಡಗಳು ಗಾಳಿಯಲ್ಲಿ. ಇವುಗಳಿಂದ ಕಣ್ಣಿನ ದೃಷ್ಟಿಗೆ ಅಡಚಣೆ. ವಿಮಾನನಾಶಕ ದಳದವರು ನಮ್ಮನ್ನು ಗಮನಿಸುತ್ತಿದ್ದಾರಾ? ಖಂಡಿತ. ದೃಷ್ಟಿಪಥದಲ್ಲಿರುವುದನ್ನೆಲ್ಲಾ ಸ್ಪಷ್ಟವಾಗಿ ತೋರಿಸುವ ದೂರದರ್ಶಕಗಳಿವೆ ಅವರಲ್ಲಿ. ನಾನು ಬಾಂಬ್ ಅನ್ನು ಸಮೀಪಿಸುತ್ತೇನೆ. ಒಮ್ಮೆ ಅಳುಕುತ್ತೇನೆ. ಮುಂಜಾಗ್ರತೆ-ಇಲ್ಲ, ನನ್ನ ಬೆನ್ನಿಗೆ ರಕ್ಷೆಯಾಗಿ ವಿಮಾನನಾಶಕ ದಳವಿದೆ ಅನ್ನಿಸಿ-ನೇರವಾಗಿ ತಲೆಎತ್ತಿ ಮುಂದುವರಿಯುತ್ತೇನೆ. ನಡುಬಗ್ಗಿಸಿ ನಡೆಯುವುದು ಅಧೈರ್ಯದ ಲಕ್ಷಣ. ಅವರಿಗೆ ಇಷ್ಟವಿಲ್ಲ.

ಒಣಗಿದ ಪೊದೆಯೊಂದರ ಮೇಲೆ ಬಿದ್ದಿದೆ ಆ ಅಮಂಗಲಕರ ಗೋಲ. ಮಣ್ಣಿನಲ್ಲಿ ಅರ್ಧಂಬರ್ಧ ಹೂತು ಹೋಗಿದೆ. ನಿಂಬೆಬಣ್ಣದ ಎರಡು ಪಟ್ಟಿಗಳು ಥಳಾಗಿ ಕಾಣುತ್ತವೆ. ನನ್ನ ಪುಟ್ಟ ಪಿಕಾಸಿಯಿಂದ ಅದರ ಸುತ್ತ ಅಗೆಯಲು ಪ್ರಾರಂಭಿಸುತ್ತೇನೆ. ಗಟ್ಟಿನೆಲ, ಕಲ್ಲು ತುಂಬಿದ ಮಣ್ಣನ್ನು ಆಚೀಚೆ ಎಸೆಯುತ್ತೇನೆ. ಒಮ್ಮೊಮ್ಮೆ ಪಿಕಾಸಿ ಠಣಾರ್ ಎಂದು ಬಾಂಬ್‌ಗೆ ತಾಕಿ ಕಿವಿಚುಚ್ಚುವಂಥ ಶಬ್ದ ಉಂಟು ಮಾಡುತ್ತದೆ. ನನ್ನ ಮೈಯಲ್ಲಿ ವಿದ್ಯುತ್ ಸಂಚಾರ. ತಕ್ಷಣ ಎಚ್ಚರಗೊಂಡು–ಅಯ್ಯೋ ನಾನು ಇಷ್ಟು ಸಿಧಾನಮಾಡಿದರೆ ಹೇಗೆ–ಬೇಗಬೇಗ ಕೈ ಓಡಿಸುತ್ತೇನೆ. ಬೆಚ್ಚಗಾಗಿದೆ. ಬಾಂಬು. ಒಳ್ಳೆಯ ಶಕುನವಲ್ಲ. ಇದರ ಬಿಸಿ ಸೂರ್ಯನ ಶಾಖದಿಂದಲೋ, ಇಲ್ಲ...?

ಥಅ ಸಿಳ್ಳೆ ಊದುತ್ತಾಳೆ. ಅನಂತರ ಇಪ್ಪತ್ತು ನಿಮಿಷಗಳು ತೆವಳುತ್ತವೆ. ಜಾಗರೂಕತೆಯಿಂದ ನಾನು ತಂದಿದ್ದ ಸಿಡಿಮದ್ದುಗಳ ಪೊಟ್ಟಣವನ್ನು ಅಗೆದ ಹೊಂಡದಲ್ಲಿ ಇರಿಸಿ ಕಡ್ಡಿ ಗೀರಿ ರಕ್ಷಣೆಗಾಗಿ ಓಡುತ್ತೇನೆ.

ಇನ್ನೊಮ್ಮೆ ಸಿಳ್ಳೆಯ ಸದ್ದು. ನಾನು ಅಂಗಾತ ಮಲಗಿ ನನ್ನ ಗಡಿಯಾರದ ಟಿಕ್ ಟಿಕ್ ಎಣಿಸುತ್ತೇನೆ. ಸ್ತಬ್ಧತೆ, ನನ್ನ ಗುಂಡಿಗೆಯ ಬಡಿತ ಕೇಳುತ್ತಿದೆ. ಕೈಗಡಿಯಾರದ ಮುಳ್ಳು ಆದಷ್ಟು ನಿಧಾನವಾಗಿ ಓಡುತ್ತಿದೆ, ಸಂಖ್ಯೆಗಳನ್ನು ಮುಟ್ಟುತ್ತ. ಅಲ್ಲಿ ಬೆಂಕಿಯು ತಂದಿ ನಿಧಾನವಾಗಿ ಬಾಂಬಿನ ಮುಖವನ್ನು ಮುಟ್ಟಿಡಲು ಧಾವಿಸುತ್ತಿದೆ.

ದಿನಾಲೂ ಐದು ಬಾಂಬ್ ಸಿಡಿಸಬೇಕು. ಅಬ್ಬಬ್ಬಾ ಎಂದರೆ ಮೂರು ಅದಕ್ಕಿಂತ ಕಮ್ಮಿಯಿಲ್ಲ. ನಾನು ಸಾವಿನ ಬಗ್ಗೆ ಆಲೋಚಿಸುತ್ತೇನೆ. ಆಲೋಚನೆ ದಿಕ್ಕು ತಪ್ಪುತ್ತದೆ. ಸದ್ಯದ 'ಜ್ವಲಂತ' ಪ್ರಶ್ನೆ: ಬಾಂಬು ಸಿಡಿಯುತ್ತದೆ ತಾನೆ? ಅದು ಸಿಡಿಯಲಿಲ್ಲ, ಮತ್ತೆ ಇದೆಲ್ಲ ಆಚರಣೆಗಳ ಪುನರಾವೃತ್ತಿ. ಅಬ್ಬಾ ಆ ಕಲ್ಪನೆಯೇ ಭಯಾನಕ. ಬಾಯೆಲ್ಲ ಉಪ್ಪುಪ್ಪು ಎಂದು ಭಾಸವಾಗುತ್ತದೆ. ಬೆವರಿನಲ್ಲಿ ಮೈ ತೊಯ್ದಿದೆ. ಬೋರಲಾಗಿ ಮಲಗಿದಾಗ ಬಾಯಲ್ಲಿ ಒಂದೆರಡು ಮರಳಿನ ಹರಳುಗಳೂ ಹೋಗಿವೆ.

ಇದ್ದಕ್ಕಿದ್ದಂತೆ ಒಂದು ಗುಡುಗಿನ ಮಹಾಶಬ್ದ ನನ್ನ ಕಿವಿತಮಟೆಯನ್ನು ಅಪ್ಪಳಿಸುತ್ತದೆ. ಉಸಿರು ಬಿಗಿಹಿಡಿಯುತ್ತೇನೆ. ಕಣ್ಣುಗಳಲ್ಲಿ ಉರಿ. ಮತ್ತೆ ಅವುಗಳನ್ನು ತೆರೆಯುವುದು ದುಸ್ಸಾಹಸ. ಮದ್ದಿನ ದುರ್ವಾಸನೆಗೆ ಹೊಟ್ಟೆ ತೊಳಸುತ್ತದೆ. ಇನ್ನೂ ಮೂರು ಆಸ್ಫೋಟನೆಗಳು. ಮೇಲಿಂದ ಕಲ್ಲು, ಮಣ್ಣು, ಧೂಳು ಎಲ್ಲ ಮತ್ತೆ ಧೊಪ್ಪನೆ ನೆಲಕ್ಕೆ ಬೀಳುತ್ತವೆ. ಚೂರುಗಳು ನನ್ನ ತಲೆಯ ಮೇಲೂ ಹಾರುತ್ತವೆ.

ಮೇಲೆದ್ದ ಕೂಡಲೇ ಧೂಳನ್ನು ಝಾಡಿಸಿಕೊಂಡು ಅಗಲವಾಗಿ ಕಣ್ತೆರೆಯುತ್ತೇನೆ. ಥಅ ಎಲ್ಲಿ? ಹುಡುಕಲು ಓಡುತ್ತೇನೆ. ಇತ್ತ ಬರಬೇಕು ಅವಳು -ನನ್ನನ್ನು, ನೊಳನ್ನು ಕೂಡಿಕೊಳ್ಳಲು. ಅದೋ, ನೊ ಎದುರಿಗೇ ಬಂದಳು –ಏದುತ್ತ; ಗಾಯದ ಗುರುತು ಬಿಸಿಲಿನಲ್ಲಿ ಹೊಳೆಯುತ್ತಿದೆ, ಹೆಗಲಿನಲ್ಲಿ ತೂಗುವ ಪ್ಯಾರಾಚೂಟ್ ಬಟ್ಟೆಯ ತುಂಡು ರಭಸದ ಗಾಳಿಯೊಂದಿಗೆ ಕುಸ್ತಿಯಾಡುತ್ತಿದೆ.

ಎಡವಿ ಬಿದ್ದುಬಿಟ್ಟಳು ನೊ. ಮೇಲೆಬ್ಬಿಸಿದೆ. ಆದರೆ ನಿತ್ರಾಣಳಂತೆ ಕುಸಿದಳು. ಅಗಲವಾಗಿ ತೆರೆದ ಕಣ್ಣುಗಳಲ್ಲಿ ಮೃತ್ಯುಭಾಯೆ. ಏನಾಗುತ್ತಿದೆ? ನನಗೊಂದೂ ಅರ್ಥವಾಗದು.

"ನೊ, ಎಲ್ಲಿಗೆ ಏಟು ಬಿತ್ತು? ಹೇಳಮ್ಮ, ಪುಟ್ಟ ತಂಗಿ."

ಕಣ್ಣಲ್ಲಿ ನೀರಿಲ್ಲ, ಮಾತುಗಳು ಗಂಟಲಿನಲ್ಲಿ ತಡವರಿಸುತ್ತಿವೆ. ತೊಡೆಯ ಮೇಲೆ ಅವಳನ್ನು ಮಲಗಿಸಿಕೊಳ್ಳುತ್ತೇನೆ. ಭುಜದಿಂದ ನೆತ್ತರು ಸೋರುತ್ತಿದೆ. ಬಾಯಾರಿದ ಭೂಮಿಯ ಮೇಲೆ ಕೆಂಪುರಕ್ತದ ಮಡು. ಅವಳ ಕಣ್ಣುಗಳು ಮುಚ್ಚಿಕೊಂಡಿವೆ. ಬಟ್ಟೆಯೆಲ್ಲ ರಕ್ತಗೆಂಪು. ಆಗಿದ್ದಿಷ್ಟೆ: ಬಾಂಬ್ ಗಾಳಿಯಲ್ಲಿ ಹಾರಿ ಅನಂತರ ಸಿಡಿದಿತ್ತು. ಅವಳು ಒರಗಿ ಮಲಗಿಕೊಂಡಿದ್ದ ರಕ್ಷಣಾ ಗೋಡೆ ಅವಳ ಮೇಲೆ ಕುಸಿದಿತ್ತು.

ಅವಳ ಗಾಯವನ್ನು ಕುದಿಸಿದ ಊಟೆಯ ನೀರಿನಲ್ಲಿ ತೊಳೆದೆ. ಆಳವಾದ ಗಾಯವೇನಲ್ಲ. ಮೇಲ್ಮೈ ಪೆಟ್ಟು. ಆದರೆ ಅಷ್ಟು ಹತ್ತಿರ ಬಾಂಬ್ ಸ್ಫೋಟಿಸಿದ್ದರಿಂದ ಅವಳಿಗೆ ಆಘಾತ ಆಗಿದೆ. ಸೂಜಿ ಚುಚ್ಚಿ ಮದ್ದನ್ನು ಒಳಸೇರಿಸುತ್ತೇನೆ. ಅವಳ ಕಣ್ಣುಗಳು ಅರೆತೆರೆದಿವೆ. ಸ್ವಲ್ಪ ಆರಾಮವಿರಬೇಕು. ಹೆಚ್ಚು ನೋವಿಲ್ಲವೇನೋ.

ಹೊರಗಡೆ ಥಅ ಶತಪಥ ತಿರುಗುತ್ತಿದ್ದಾಳೆ, ಬೋನಿನಲ್ಲಿರುವ ಹುಲಿಯ ಹಾಗೆ. ಏನು ಮಾಡಬೇಕೋ ತಿಳಿಯದು ಅವಳಿಗೆ. ತನ್ನಿಂದ ಏನು ಸಹಾಯವಾಗಬಹುದು? ಅವಳಿಗೆ ರಕ್ತ ನೋಡಿದರೆ ದಿಗಿಲು. ನೊಗೆ ಪಟ್ಟಿ ಕಟ್ಟಿ, ನೆತ್ತರಿನಿಂದ ತೊಯ್ದಿದ್ದ ಬಟ್ಟೆ ಬದಲಾಯಿಸಿದ ಮೇಲೆ ಒಳಗೆ ಹೊಕ್ಕು ಅವಳ ಬಳಿ ಕೂಡುತ್ತಾಳೆ.

"ಯೂನಿಟ್ಟಿಗೆ ಫೋನ್ ಆದರೂ ಮಾಡಲಾ?"

ನೊ ಉತ್ತರಿಸುತ್ತಾಳೆ. "ಛಿ! ನಾನೇನು ಸತ್ತೋಗೋಲ್ಲ. ಅವರು ರಸ್ತೆ ಕೆಲಸದಲ್ಲಿರೋವಾಗ ಯಾಕೆ ಇಲ್ಲದ ಸಿರುಕುಳ ಕೊಡೋದು? ನಂಗೇನೂ ಆಗಿಲ್ಲ. ಅರೆ, ಹುಚ್ಚಮ್ಮ, ನಿನಗೆ ಯಾಕೆ ಇಷ್ಟೊಂದು ತಳಮಳ?"

"ಯಾವಾಗಲೂ ಅಷ್ಟೆ. ನೋವು ತಿನ್ನೋರಿಗಿಂತ ಅವರನ್ನ ನೋಡೋವ್ರಿಗೇ ಅದು ಜಾಸ್ತಿ ಅನ್ನಿಸುತ್ತೆ."

ಬಾಗಿಲ ಕಡೆ ನೋಡಿ ಕಿತ್ತಲಿಯಿಂದ ನೀರು ಬಗ್ಗಿಸಿಕೊಂಡು ಗಟಗಟ ಕುಡಿಯುತ್ತಾಳೆ ಥಅ. ನೊ ತೋಳಿನಿಂದ ಕಣ್ಣುಗಳನ್ನು ಮರೆಮಾಡಿಕೊಳ್ಳುತ್ತಾಳೆ. ಈಗ ಕುಡಿಯುವುದು ತಪ್ಪು ಎಂದು ಅವಳಿಗೆ ಗೊತ್ತು. ಅವಳಿಗಾಗಿ ಹಾಲನ್ನು ಸಿದ್ಧಪಡಿಸಲು ಪುಡಿಗಾಗಿ ತಡಕಾಡುತ್ತೇನೆ.

"ತುಂಬಾ ಸಕ್ಕರೆ ಹಾಕಿ ಗಟ್ಟಿಯಾಗಿ ಮಾಡು." ಥಅಳ ಸಲಹೆ.

ಹಾಲು ಕುಡಿದ ನಂತರ ನೊ ನಿದ್ರೆ ಹೋಗುತ್ತಾಳೆ. ಶೋಧಕ ವಿಮಾನವೊಂದು ಬೆಟ್ಟಗಳ ಮೌನವನ್ನು ಸೀಳುತ್ತದೆ.

ಬೆನ್ನಿಗೆ ಒರಗಿ ಕುತ್ತಿಗೆಯ ಮೇಲೆ ಕೈ ಹಾಕಿಕೊಂಡು ಥಅ ನನ್ನ ಕಡೆ ನೋಡದೆ ಹೇಳುತ್ತಾಳೆ:

"ಹಾಡು ಡಿಂಗ್. ನಿನಗೆ ತುಂಬಾ ಇಷ್ಟವಾದ ಪದ ಹಾಡು."

ನನಗೆ ಇಷ್ಟವಾದ ಹಾಡುಗಳು ಬೇಕಾದಷ್ಟಿವೆ. ನಮ್ಮ ಸೈನಿಕರು ಮುಂಚೂಣಿಗೆ ಧಾವಿಸುತ್ತ ಹಾಡುವ ಲಯಬದ್ಧ ಗೀತೆಗಳು; ಜಾನಪದ ಧಾಟಿಯ ಇಂಪಾದ ಹಾಡುಗಳು. ಕೆಂಪು ಸೇನೆಯ "ಕುತೂಷಾ"... ಮುಡಿಯ ಮೇಲೆ ಗಲ್ಲವನ್ನೂರಿ ಕುಳಿತು ಕನಸು ಕಾಣುವುದು ನನ್ನ ಇಷ್ಟ:

"ನಾನಿಲ್ಲಿ ಬಂದಾಗ ನನ್ನ ಕೂದಲ ಕಪ್ಪು ಮಾಸಿರಲಿಲ್ಲ, ಛಳಿಯಾಗಿರಲಿಲ್ಲ."...ನೇಪಲ್ಸ್‌ನ ಹಾಡು. ಭಾವ ತುಂಬಿ ತೊನೆದೂಗುತ್ತದೆ. ಮೆಲು ದನಿಯಲ್ಲಿ ಹಾಡಿದರೆ ಅದರ ಸೊಗಸೆಲ್ಲ ಬಿಚ್ಚಿಕೊಳ್ಳುತ್ತದೆ.

ಥಅ ನೊಳನ್ನೇ ನೋಡುತ್ತಿದ್ದಾಳೆ. ಅವಳ ಕಾಲರ್ ಸರಿಪಡಿಸುತ್ತಾಳೆ. ಕೂದಲನ್ನು ಸವರುತ್ತಾಳೆ. ಒಮ್ಮೊಮ್ಮೆ ಅತಿಯಾಯಿತು ಇವಳದ್ದು ಎಂದು ಸಿಡಿಮಿಡಿಗೊಳ್ಳುವುದಾಗುತ್ತದೆ. ಆದರೆ ಅವಳನ್ನು ಕಲಕಿರುವ ಭಾವನೆಗಳೇನು ಎಂದು ಯೋಚಿಸಿದಾಗ ಸುಮ್ಮನಾಗುತ್ತೇನೆ. ಒಬ್ಬರಿಗೆ ಇನ್ನೊಬ್ಬರು ಧೈರ್ಯ ಹೇಳಬೇಕಾದ ಸಂದರ್ಭದಲ್ಲಿ ಅಳುವುದು ತೀರಾ ಅವಮಾನದ ವಿಷಯ.

ಕಣ್ಣುಗಳ ನೋಟವೇ ಮಾತನಾಡುತ್ತದೆ. ಮಾತುಗಳಿಗಿಲ್ಲಿ ಬೆಲೆಯಿಲ್ಲ. ಪರಸ್ಪರ ಒಮ್ಮೆ ದೃಷ್ಟಿ ಅದಲು ಬದಲಾದಾಗ ನಮಗೆ ಇನ್ನೊಬ್ಬರ ಅಂತರಾಳವೆಲ್ಲ ಅರ್ಥವಾಗುತ್ತದೆ.

ಥಅ ಒಮ್ಮೆಲೇ ಹಾಡಲು ತೊಡಗುತ್ತಾಳೆ:

"ಇದೋ ಥಂಗ್ ಲುಂಗ್! ಇದೋ ಪೂರ್ವದ ಅಪೂರ್ವ ನಗರ ಹನಾಯ್!" ಅಪಸ್ವರ. ಕಂಠವೂ ಶುದ್ಧವಾಗಿಲ್ಲ. ಆದರೂ ಗೀತೆಗಳನ್ನು ಬರೆದಿಟ್ಟುಕೊಳ್ಳುವ ಹುಚ್ಚು ಇವಳಿಗೆ ಹೋಗಿಲ್ಲ. ಮೂರು ನೋಟ್ ಪುಸ್ತಕಗಳು ಭರ್ತಿಯಾಗಿವೆ ಆಗಲೇ. ನಾನು ಯಾವಾಗಲೋ ಯಾವುದೋ ರಾಗಕ್ಕೆ ಜೋಡಿಸಿದ್ದ ಹುಚ್ಚುಚಂಚ್ಚಾದ ಪದಗುಚ್ಛಗಳನ್ನೂ ತಪ್ಪದೇ ಬರೆದುಕೊಂಡಿದ್ದಾಳೆ!

ಹೊರಗಡೆ ಮೋಡವೊಂದು ಮೇಲೇಳುತ್ತದೆ. ಅದರ ಹಿಂದೆ ಇನ್ನೊಂದು, ಮತ್ತೊಂದು. ಗುಹೆಯ ಮುಂದಿನ ಆಕಾಶದ ಚೂರು ಮರೆಯಾಗಿ ಕತ್ತಲು. ಬಿರುಗಾಳಿ ಇರಬೇಕು. ಸುಟ್ಟ ಕೊಂಬೆಗಳ ನಡುವೆ ಘೂತ್ಕರಿಸುವ ಗಾಳಿ. ತರಗೆಲೆಗಳು ಮೇಲೆದ್ದು ಅರ್ಭಟಿಸುತ್ತ ನರ್ತಿಸುತ್ತವೆ. ಇದೆಲ್ಲ ಒಂದೇ ಕ್ಷಣದಲ್ಲಿ, ಕಣ್ಮುಚ್ಚಿ ತೆರೆಯುವಷ್ಟರಲ್ಲಿ, ನಡೆದು ಹೋಗಿದೆ. ಮಳೆ...ಅಲ್ಲ...ಆಲಿಕಲ್ಲು! ಗುಹೆಯ ಛಾವಣಿಯ ಮೇಲೆ ಟಪಟಪ ಸದ್ದು. ನಾನು ಹೊರಬರುತ್ತೇನೆ. ಹರಿತವಾದ್ದೇನೋ ಗಾಳಿಯಲ್ಲಿ ತುಂಡರಿಸುತ್ತ ಬರುತ್ತಿದೆ. ಕುಳಿಗಾಳಿ. ನನ್ನ ಕೆನ್ನೆಗಳಿಗೆ ಬಡಿದು ನೋವನ್ನುಂಟುಮಾಡುತ್ತದೆ.

"ಆಲಿಕಲ್ಲು! ಆಲಿಕಲ್ಲು!"

ಒಳಕ್ಕೆ ಧಾವಿಸಿದವಳೇ ನೊಳ ಕೈಯಲ್ಲಿ ಒಂದು ಹಿಡಿ ಆಲಿಕಲ್ಲು ತುಂಬಿ ಓಡುತ್ತೇನೆ. ಸಂತೋಷದಿಂದ ಹುಚ್ಚು ಹಿಡಿದಿಲ್ಲವಷ್ಟೆ ನನಗೆ?

ತಾನು ಪದವಿ ಪರೀಕ್ಷೆಗೆ ಕೂತ ವರ್ಷ ಇಂಥದೇ ಆಲಿಕಲ್ಲು ಮಳೆ. ಚಿಟಿಕೆ ಹಾಕಿದ ಹಾಗೆ ಸದ್ದು ಮಾಡುತ್ತ ಬಿದ್ದ ಆಲಿಕಲ್ಲುಗಳನ್ನು ಆಯಲು ನಾನು ಹೊರಗೆ ಧಾವಿಸಿದ್ದೆ. ಅಕ್ಕಪಕ್ಕದ ಮನೆಗಳ ಬಾಗಿಲು ತಟ್ಟಿ, "ರೀ ಏಳ್ರಿ! ಆಲಿಕಲ್ಲು ಮಳೆ ಬೀಳ್ತಿದೆ" ಎಂದು ಹುಚ್ಚಿಯ ಹಾಗೆ ಕೂಗಿದ್ದೆ. ಥೂ, ಎಂಥ ಸೋಮಾರಿಗಳು. ಇಂಥ ಹೊತ್ತಿನಲ್ಲೂ ಆರಾಮವಾಗಿ ಗೊರಕೆ ಹೊಡೀತಿದ್ದಾರೆ!

ನೆರೆಯ ಡಾಕ್ಟರ್ ಸಾಹೇಬ ಸೋಮಾರಿಯಲ್ಲ ಮಲಗಿರಲು. ಎದ್ದವನೇ "ನೋಡಮ್ಮ, ನಿನ್ನ ಈ ಹುಚ್ಚಾಟ ನಿಲ್ಲಿಸದಿದ್ರೆ ನಾವು ಮುಂದಿನ ಸಕ್ರಮ ತೆಗೆದುಕೊಳ್ಳುವ ಸುಕಾರ್ಯಕ್ಕೆ ಕೈ ಹಾಕಬೇಕಾಗುತ್ತೆ." ಎನ್ನಬೇಕೆ? ಇನ್ನೊಬ್ಬಾಕೆ ಅಧ್ಯಾಪಕಿ. "ಅಯ್ಯೋ ದೇವರೇ! ರಾತ್ರಿ ಒಂದಷ್ಟು ಸುಖವಾಗಿ ಮಲಗಿರೋಣ ಅಂದ್ರೆ ಅದಕ್ಕೂ ಬಿಡೋಲ್ವೆ..." ಎಂದು ಹಲುಬಿದಳು.

ನಮ್ಮ ಮನೆಯ ಕೆಳಗೆ ಕೋಣೆ ಮಾಡಿಕೊಂಡಿದ್ದ ಡ್ರೈವರ್ ಮಾತ್ರ ಅಂದು ರಾತ್ರಿಯಿಡೀ ನನ್ನೊಂದಿಗೆ ತಮಾಷೆಯಾಗಿ ಕಾಲ ಕಳೆದ. ಆ ಮೇಲೆ ಅವನು ಸೈನ್ಯ ಸೇರಿಬಿಟ್ಟ. ಈಗಲೂ ನನಗೆ ಪತ್ರ ಬರೆದು ಆ ದಿನದ ಆಲಿಕಲ್ಲು ಮಳೆಯನ್ನು ನೆನಪಿಸಿ ಕೊಡುತ್ತಾನೆ.

ಸದಾ ಬಾಂಬ್ ದಾಳಿಗೆ ಗುರಿಯಾದ ಈ ಬೆಟ್ಟದ ಮೇಲೆ ಇವತ್ತು ಆಲಿಕಲ್ಲುಗಳು ಬೀಳುತ್ತಿವೆ. ಬಾಲ್ಯದ ನೆನಪುಗಳು ತೇಲಿ ಬಂದು ನಾನು ಉನ್ಮಾದಿನಿಯಾಗುತ್ತೇನೆ. ನನ್ನನ್ನು ಗದರಿಸಲು ಯಾರೂ ಇಲ್ಲ ಇಲ್ಲಿ. ಥಅ ನೆಲದ ಮೇಲೆ ಬಿದ್ದುದನ್ನೇನೋ ಹೆಕ್ಕುತ್ತಿದ್ದಾಳೆ. ಇನ್ನೇನು, ಆಲಿಕಲ್ಲಿರಬೇಕು! ನೊ ಮೇಲೆದ್ದು ಕುಳಿತು ಕೂಗುತ್ತಾಳೆ.

"ಏ, ನನಗೆ!"

ಬಂದಷ್ಟೇ ಬೇಗ ನಿಂತುಬಿಟ್ಟಿತು ಮಳೆ. ಛೆ, ಅನ್ಯಾಯ! ಏದುಬ್ಬಸ

ಪಡುತ್ತಿದ್ದರೂ ನನಗೆ ನಿರಾಸೆ. ಆಲಿಕಲ್ಲೆಂದರೆ ಅಷ್ಟು ಪ್ರೀತಿ ಎಂದಲ್ಲ. ಎಲ್ಲ ಬಿರುಗಾಳಿಗಳೂ ಒಂದಲ್ಲ ಒಮ್ಮೆ ಕೊನೆಗಾಣಲೇಬೇಕು. ಆದರೆ ಇದು ನನ್ನ ಮನಸ್ಸಿನ ಒಳಕೋಣೆಯೊಂದನ್ನು ತೆರೆಯುತ್ತದೆ-ಯಾರದೋ, ಯಾವುದೋ ನೆನಪನ್ನು ಕೆದಕಿ ಹೊರತೆಗೆಯುತ್ತದೆ. ನನ್ನ ತಾಯಿ, ನನ್ನ ಕೋಣೆಯ ಕಿಟಕಿ, ಆ ಕಿಟಕಿಯಿಂದ ಕಾಣುವ ಆಗಸ, ಆಗಸದಲ್ಲಿ ಹೊಳೆಯುವ ನಕ್ಷತ್ರಗಳು,... ಅದೊಂದು ಬೇರೆಯೇ ಆದ ಪ್ರಪಂಚ. ದಾರಿಯ ಬದಿಯಲ್ಲಿದ್ದ ಹೆಮ್ಮರಗಳು, ನಾಟಕ ಮಂದಿರದ ಮೇಲು ಗುಮ್ಮಟ, ಐಸ್ ಕ್ರೀಮ್ ಮಾರುವವಳು, ಅವಳು ತಳ್ಳಿಕೊಂಡು ಹೋಗುವ ಪುಟಾಣಿ ಗಾಡಿ, ಅವಳ ಹಿಂದೆ ಹಿಂಡು ಮಕ್ಕಳು, ಕಪ್ಪು ರಾಳ ಬಳಿದ ನುಣುಪಾದ ರಸ್ತೆಗಳು, ಮಳೆ ಬಂದ ಮೇಲೆ ನೋಡಬೇಕು ಅವನ್ನ. ಹೊಳೆಯುತ್ತವೆ. ಕಪ್ಪು ನದಿಯೇನೋ ಎಂಬಂತೆ. ದಾರಿಗಳು ಕೂಡುವಲ್ಲಿ ನೆಟ್ಟ ದೀಪಸ್ತಂಭದಿಂದ ತೂಗುವ ದೀವಿಗೆಗಳು. ಗಾಳಿ ಬೀಸಿದಾಗ ಅವು ಅತ್ತಿಂದಿತ್ತ ತೊನೆಯುವ ಅದ್ಭುತ ದೃಶ್ಯ...ಮಂಡಕ್ಕಿಯ ಮೂಟೆಯನ್ನು ತಲೆ ಮೇಲೆ ಹೊತ್ತು ಕೂಗು ಹಾಕುತ್ತ ಬರುವ ಹೆಂಗಸು.

ಎಷ್ಟು ದೂರ ಅವೆಲ್ಲ...ದೂರದ ಹನಾಯ್‌ನಲ್ಲಿ. ಆದರೆ ಈ ಆಲಿಕಲ್ಲು ಮಳೆಯ ಕಾರಣ ಅವೆಲ್ಲ ಕ್ಷಣವೆರಡು ತೀರ ಸನಿಹವಾಗುತ್ತವೆ. ನನ್ನ ಕೈ ಹಿಡಿತದಲ್ಲೇ ಇವೆಯೋ ಎಂಬಂತೆ.

ನಮ್ಮನ್ನು ಜನ ಗೇಲಿ ಮಾಡುತ್ತಿದ್ದರು. ಮೂರು ದಿವಸ ಮನೆಬಿಟ್ಟು ಇದ್ದು ಬಿಡಿ. ನೋಡೋಣ ಅಂತ. ಈಗ ಮೂರು ವರ್ಷ ಸಂದಿದೆ. ಮನೆ ಮಾರು ಬಿಟ್ಟು ಈ ಮನೆಯಲ್ಲಿದ್ದೇವೆ. ಡ್ರೈವರ್‌ಗಳಿಗೆ, ಫಿರಂಗಿ ದಳದವರಿಗೆ ನಮ್ಮ ಪೂರ್ವಾಪರ ಎಲ್ಲ ಗೊತ್ತು. ನಮಗೂ ಅಷ್ಟೆ. ಅವರಲ್ಲಿ ಯಾರು ಪ್ರೇಮಿಸಿದ್ದಾರೆ, ಯಾರು ಪ್ರೇಯಸಿಯೊಂದಿಗೆ ಮುನಿದಿದ್ದಾರೆ, ಯಾರು ಅಳ್ಳೆದೆಯವರು, ಯಾರು ಧೀರರು-ಎಲ್ಲಾ ಗೊತ್ತು. ನಾವು ರಾತ್ರಿ ರಸ್ತೆ ರಿಪೇರಿಯಲ್ಲಿ ತೊಡಗಿರುವಾಗ ಅವರು ಜೀಪುಗಳಲ್ಲಿ ಹಾದು ಹೋಗುತ್ತ ಹಲ್ಲುಪುಡಿಯನ್ನೋ, ಸುವಾಸನೆಯುಳ್ಳ ಕಾಗದವನ್ನೋ, ಪೆಪ್ಪರ್‌ಮಿಂಟನ್ನೋ ಎಸೆಯುತ್ತಾರೆ. ನಾವು "ಹನಾಯ್‌ನಿಂದ ರಕ್ಷಣಾ ಪಡೆ ಬಂದಿದೆ!" ಎಂದುಕೊಳ್ಳುತ್ತೇವೆ. ಇಂಥ ವಸ್ತುಗಳೆಲ್ಲ ಬಂದರೆ ಹನಾಯ್‌ನಿಂದಲೇ ಬರಬೇಕು.

ನಾವು ಹನಾಯ್‌ನಲ್ಲಿದ್ದಾಗ ಇವಕ್ಕೆ ಬೆಲೆಯಿಲ್ಲ. ಆದರೆ ಈಗ! ಪರಿಮಳ ಬೀರುವ ಕಾಗದದ ಮೇಲೆ ಪತ್ರ ಬರೆದು ನಮ್ಮವರಿಗೆ-ಹನಾಯ್‌ನಿಂದ ನಮಗಿಂತಲೂ ದೂರ ಇರುವವರಿಗೆ-ಕಳುಹಿಸುವುದರಲ್ಲಿ ಎಷ್ಟೊಂದು ಮೋಜಿದೆ!

"ಡಿಂಗ್!" ಥಅ ಅರಚುತ್ತಾಳೆ.

ನಾನು ತಕ್ಷಣ ಬಗ್ಗಿ ನೆಲದ ಮೇಲೆ ಅಡ್ಡಾಗುತ್ತೇನೆ. ಬಾಂಬ್ ಸಿಡಿಯುವ ಮುನ್ನವೇ ಸ್ಫೋಟದ ಸದ್ದು ಕೇಳಿಸುತ್ತದೆಯೋ ಎನಿಸುತ್ತದೆ. ಇಷ್ಟು ಸನಿಹದಲ್ಲಿ ಎಲ್ಲವೂ ಅಸ್ಪಷ್ಟ. ಭೂಮಿ ಥರಥರ ನಡುಗುವುದೊಂದಷ್ಟೆ ತಿಳಿಯುತ್ತದೆ.

ತಲೆಯ ಮೇಲೆ ಸಹಸ್ರಾರು ವಿಮಾನಗಳು ಹಾದುಹೋದಂತೆ. ಥಅ ಒಳಕ್ಕೆ ತೆವಳುತ್ತ "ಥತ್! ಉಸಿರಾಡಲೂ ಬಿಡೋದಿಲ್ಲ" ಎಂದು ಗೊಣಗಿದಳು. ಸಣ್ಣ ನಡು, ಸದೃಢವಾದ ಮೈಕಟ್ಟು; ಹೆಗಲ ಮೇಲೆ ಹರಡಿದ ಜೊಂಪೆ ಕೂದಲು. ತಲೆಗೆ ಕಟ್ಟಿದ ಸ್ಕಾರ್ಫ್ ಮುಸುಕು ಮುಸುಕಾಗಿ ಕಾಣುತ್ತದೆ. ಬಟ್ಟೆ ನೇತು ಹಾಕಿದ ಹಗ್ಗಕ್ಕೆ ಕೈಯಿಟ್ಟು ನಿಂತಿದ್ದಾಳೆ. ರಂಗಭೂಮಿಯ ಮೇಲೆ ಒಳ್ಳೆಯ ನಟಿಯಾಗಬಲ್ಲಳು ಥಅ-ಆದರೆ ಆ ಗೊಗ್ಗರು ಧ್ವನಿ ಮಾತ್ರ...! ಅದು ಅವಳಿಗೆ ತಿಳಿಯದ್ದೇನೂ ಅಲ್ಲ.

"ಟೆಲಿಫೋನ್ ಹತ್ತಿರ ತಗೊಂಬಾ."
ನೊ ಕೈಸನ್ನೆ ಮಾಡಿ ಹೇಳುತ್ತಾಳೆ. ಅವಳ ಅಪೇಕ್ಷೆಯನ್ನು ನಾನು ಈಡೇರಿಸುತ್ತೇನೆ. ಕಿತ್ತಲಿಯನ್ನು ಕೈಗೆತ್ತಿಕೊಂಡು ಥಅಳೊಡನೆ ಹೊರಬರುತ್ತೇನೆ.

ಓಡಿದ್ದರ ಪರಿಣಾಮವಾಗಿ ತೊಡೆಯ ಮೇಲಿನ ಗಾಯದ ಜಾಗ ನೋಯಲು ಪ್ರಾರಂಭವಾಗಿದೆ. ಕುಂಟಬೇಕಾದೀತೇನೋ ಎನಿಸುತ್ತದೆ. ಥಅ ಎಷ್ಟು ದೃಢ ಚಿತ್ತದವಳು ಎಂದರೆ, ತಾನೊಬ್ಬಳೇ ಬೆಟ್ಟದ ಮೇಲೆ ಹೋಗಲು ಹಿಂಜರಿಯುವುದಿಲ್ಲ. ಆ ಭಯಕ್ಕೆ ನಾನು ಹೇಗೋ ಸಹಿಸಿಕೊಂಡು ಮೇಲೇರುತ್ತೇನೆ.

ಈ ಸಲ ಎಣಿಕೆಗೆ ಕಷ್ಟವಾಗುವಷ್ಟು ಬಾಂಬ್ ಗೆಣಿಗಳು. ಕಣ್ಣಿನಲ್ಲೇ ಎಣಿಸುತ್ತ ಗಟ್ಟಿಯಾಗಿ ಹೇಳುತ್ತೇವೆ. ಮೊತ್ತವನ್ನು ಥಅ ರಿಜಿಸ್ಟರಿನಲ್ಲಿ ಬರೆಯುತ್ತಾಳೆ. ಸಿಡಿಯದೆ ಬಿದ್ದ ಬಾಂಬ್‌ಗಳು ಇಲ್ಲ ಈ ಸಲ. ಒಟ್ಟು 2000 ಕ್ಯೂಬಿಕ್ ಮೀಟರಿನಷ್ಟು ಕುಳಿ ತುಂಬಲಿಕ್ಕಿದೆ. ಒಮ್ಮೆಲೇ ಹಿಂದಿನಿಂದ ಯಾರೋ ನೂಕಿದ ಹಾಗಾಗಿ ಕೆಳಗೆ ಬೀಳುತ್ತೇನೆ. ಥಅ ನನ್ನನ್ನು ಅವಚಿಕೊಂಡೇ ನೆಲಕ್ಕೆ ಉರುಳಿದ್ದಾಳೆ. ಮಣ್ಣಿನ ಹೊರೆಯೊಂದು ನಮ್ಮ ಮೇಲೆ ಕವುಚಿಕೊಳ್ಳುತ್ತದೆ. ನಾವು ಅಗೆದಿದ್ದ ಮಣ್ಣು-ಬಿಸಿಯಾದ ಕೆಂಪು ಮಣ್ಣು. ತಲೆಯ ಮೇಲೆ ಭಾರವಾದ್ದೇನೋ ಒತ್ತಿದಂತಾಗುತ್ತದೆ. ಕಾಲನ್ನು ಝಾಡಿಸುತ್ತ ಹೊರಬರಲು ಯತ್ನಿಸುತ್ತೇನೆ. ಸ್ವಲ್ಪ ಉಸಿರಾಡುವಂತಾಗುತ್ತದೆ. ಮೂಗಿನಲ್ಲೆಲ್ಲ ಮರಳು ಹೊಕ್ಕಿದೆ. ತಲೆಯಲ್ಲಾಡಿಸಿದಾಗ ಮತ್ತಷ್ಟು ಮಣ್ಣಿನ ಮಳೆ. ಸುತ್ತಲೂ ಬರೀ ಕಪ್ಪು. ಸೀಸದಂತೆ ಭಾರವಾದ ಗಾಳಿ. ಗಾಳಿಯಲ್ಲಿ ದಟ್ಟ ಹೊಗೆ.

ಥಅ ಕಾಣಿಸದಾದಾಗ ಹೆಸರು ಹಿಡಿದು ಕೂಗುತ್ತೇನೆ. ಆದರೆ ಬಾಯಿತುಂಬಾ ಮಣ್ಣು. ಉಗಿದುಬಿಡುತ್ತೇನೆ. ಕೈಗೆ ಥಅಳ ತಲೆಗೂದಲು ಸಿಕ್ಕಿದಂತಾಗಿ ಹಿಡಿದೆಳೆಯುತ್ತೇನೆ. ಮಣ್ಣನ್ನು ಕೈಗಳಿಂದ ಅಗೆದಗೆದು ಪಕ್ಕಕ್ಕೆ ಚೆಲ್ಲುತ್ತೇನೆ. ಥಅ, ಪಿಘಾನ್ ಗೊಂಬೆಯಂತೆ ಮೆತ್ತಗಿರುವ ಥಅ, ಸಣ್ಣಗೆ ಉಸಿರಾಡುತ್ತ ಇದ್ದಾಳೆ. ನನ್ನ ಕುತ್ತಿಗೆಯನ್ನು ಭದ್ರವಾಗಿ ಹಿಡಿದು ಎದ್ದು ನಿಲ್ಲುತ್ತಾಳೆ.

ಗುಹೆಗೆ ಮರಳಿದಾಗ ನೊ ಕೇಳುತ್ತಾಳೆ.

"ಪುನಃ?"

ಮಗುವಿನ ಪ್ರಶ್ನೆಯಂತಿದೆ ಅದು.

ವಿಚಿತ್ರವಾಗಿ ಮುಗುಳ್ನಗುತ್ತಾಳೆ ಥಅ. ಅವಳ ತಾಳ್ಮೆ ಅವಳಲ್ಲಿಗೆ ಮರಳಿದೆ.

"ಅಷ್ಟೇನೂ ಇಲ್ಲ. ಕೈಕಾಲು ಏನೂ ಮುರೀಲಿಲ್ಲ ಸಧ್ಯ:"

ಅಷ್ಟೇನೂ ಇಲ್ಲವಂತೆ! ಅವಳಿಗಾಗಲೇ ಸಣ್ಣದು ಪುಟ್ಟದು ಎಲ್ಲ ಸೇರಿ ಏಳು ಗಾಯಗಳಿವೆ. ನೊಗೆ ಐದು. ನನಗೇ ಕಮ್ಮಿ, ನಾಲ್ಕು. ಹಿಂದೊಮ್ಮೆ ಹೊಟ್ಟೆಯ ಮೇಲೆ ಆಳವಾದ ಗಾಯ ಆಗಿತ್ತು, ಮೂರು ತಿಂಗಳು ಆಸ್ಪತ್ರೆಯಲ್ಲಿದ್ದೆ. ಹೀಗೆ ಮಣ್ಣಲ್ಲಿ ಹೂತುಹೋಗುವುದು ಹೊಸದೇನಲ್ಲ, ನಿತ್ಯದ ಅನುಭವ.

ಥಅ ಸಪ್ಪೆಯಾಗಿದ್ದಾಳೆ, ಸುಸ್ತಾಗಿದೆ ಅವಳಿಗೆ. ನೊ ಈಗಾಗಲೇ ಎದ್ದು ಓಡಾಡುವಂತಾಗಿದ್ದಾಳೆ. ಅವಳೇ ಥಅಗೆ ನೀರುಕೊಟ್ಟು ಕುಡಿಯಲು ಹೇಳಿ, ಕೂದಲಿನಲ್ಲಿದ್ದ ಮಣ್ಣಿನ ಹೆಂಟೆಗಳನ್ನು ಹೆಕ್ಕಲು ನೆರವಾಗುತ್ತಾಳೆ. ಇದ್ದಕ್ಕಿದ್ದಂತೆ ಅವಳ ಬಾಯಿಂದ ಘಟನೆಯ ವಿಶ್ಲೇಷಣೆ ಹೊರಬೀಳುತ್ತದೆ:

"ಆಯಕಟ್ಟಿನ ಈ ಬೆಟ್ಟದ ಮೇಲೆ ನಾವು ಇರೋದರಿಂದ."

ಥಅ ಪಕಪಕ ನಗಲು ತೊಡಗುತ್ತಾಳೆ. ನನ್ನ ಕಡೆಗೆ ತಿರುಗಿ, "ಬೇಗ ಬರ್ತ್ಯೋಡಿಂಗ್! ಮಂತ್ರಿನಂಥ ಮಾತುಗಳು..."

ನಾನು ಟೆಲಿಫೋನ್ ಹಿಡಿಯುತ್ತೇನೆ. ಥಅ ಬಳಿ ಬಂದವಳೇ ಹೇಳುತ್ತಾಳೆ.

"ಹೇಳೋದೆಲ್ಲ ಹೇಳಿಬಿಟ್ಟು ಆದ ಮೇಲೆ, ಇಲ್ಲಿ ನಮ್ಮ ಸ್ಥಿತಿ ಏನೂ ಚಿಂತಾಜನಕ ಅಲ್ಲ, ಪರವಾಯಿಲ್ಲ ಅಂತ ಹೇಳಿಬಿಡು."

ಟೆಲಿಫೋನ್ ಎತ್ತಿಕೊಂಡವನು ಕಂಪೆನಿಯ ವಿನಯಶೀಲ ಕಮಾಂಡರ್ ಅಲ್ಲ. ಬದಲಿ ಅಧಿಕಾರಿ.

"ಕಮಾಂಡರ್ ಎಲ್ಲಿ?"

"ರಸ್ತೆ ಕೆಲಸ. ರಾಕೆಟ್‌ಗಳು ಬರುತ್ತವಂತೆ. ಮಧ್ಯಾಹ್ನ ವಿಮಾನ ಬಂದರೂ ಇನ್ನೂ ಯಾರೂ ನಿನ್ನೆಯ ನಿದ್ದೆ ಮಾಡಿಲ್ಲ...ನೀವು? ಹೇಗಿದೀರಿ?"

"ಸ್ವಲ್ಪ ಸುಸ್ತೇನೋ ಇದೆ. 2000 ಕ್ಯೂಬಿಕ್ ಮೀಟರಿನಷ್ಟು ಮಣ್ಣು ತುಂಬಲಿಕ್ಕಿದೆ ಅಂತ ಹೇಳಿದ್ನಲ್ಲ. ರಾತ್ರಿವರೆಗೂ ದುಡಿಯಬೇಕಾಗಬಹುದು. ಆದರೂ ಏನಂತೆ, ಪರವಾಯಿಲ್ಲ. ನಮ್ಮ ಸ್ಥಿತಿ ಏನೂ ಚಿಂತಾಜನಕ ಅಲ್ಲ..."

"ಕೆಲಸ ಬಹಳ ಕಠಿಣವಾದರೆ ಒಂದು ಬೆಂಕಿಯ ಜ್ವಾಲೆ ಹಾರಿಸಿ, ನೆರವಿಗೆ ಕರೆಯಿರಿ, ತಿಳೀತಾ? ನಿಮ್ಮ ಯೋಗಕ್ಷೇಮಕ್ಕೆ ಯೂನಿಟ್ ಮೊದಲ ಪ್ರಾಶಸ್ತ್ಯ ನೀಡ್ತದೆ ಎಂಬೋದು ನಿಮಗೆ ಗೊತ್ತಲ್ಲ? ನಿಮ್ಮ ಕರೆ ಬಂದೊಡನೆಯೇ ಕಮ್ಯಾಂಡೋಗಳು ತಕ್ಷಣ ಅಲ್ಲಿಗೆ ಬರ್ತಾರೆ."

ಸಂಜೆ ಸಮೀಪಿಸುತ್ತಿದೆ. ನಾನು, ಥಅ ಮೂರು ಸಲ ಬೆಟ್ಟದ ಮೇಲೆ ಹೋಗಿದ್ದೇವೆ. ಎಂಟು ಬಾಂಬ್‌ಗಳನ್ನು ನಾಶಪಡಿಸಿದ್ದೇವೆ. ಇನ್ನೂ 3200 ಕ್ಯೂಬಿಕ್ ಮೀಟರುಗಳಷ್ಟು ಮಣ್ಣು ತುಂಬಿಸಬೇಕು. ಥಅಳನ್ನು ಗುಹೆಯಲ್ಲೇ ಇರುವಂತೆ ಒಪ್ಪಿಸಲು ನಾನು ಕಟ್ಟುವ ಕತೆಗಳು ಒಂದೇ ಎರಡೇ? ಅವಳೂ ಅಂಥ ಪೆದ್ದು ಹುಡುಗಿಯೇನಲ್ಲ, ನನ್ನ ಕತೆಗಳನ್ನು ನಂಬಲಿಕ್ಕೆ. ನನಗಿಂತ ಮುಂಚೆ ಎದ್ದು ಓಡಿಬಿಡುತ್ತಾಳೆ, ಏದುಸಿರುಬಿಡುತ್ತ. ಹಣೆಯ ನರಗಳು ಉಬ್ಬಿ ಬರುತ್ತವೆ. ಎಲ್ಲಿ ಬಿದ್ದುಬಿಡುತ್ತಾಳೋ ಎಂದು ನಾನು ಭಯಗೊಳ್ಳುತ್ತೇನೆ. ನಾವು ಗುಹೆಬಿಟ್ಟು ಹೊರಟಾಗೆಲ್ಲ ನೊ ಗೊಣಗುತ್ತಾಳೆ:

"ಥಅ! ಥಅ..."

ಮೂರನೆಯ ಸಲ ಹಿಂದಿರುಗಿದಾಗ ಮಾತ್ರ ನಾನು ಅರೆಜೀವವಾಗಿದ್ದೇನೆ. ಥಅಳೇ ನನ್ನನ್ನು ನೆಲದ ಮೇಲೆ ನಿಧಾನವಾಗಿ ಮಲಗಿಸುತ್ತಾಳೆ. ನಿಧಾನವಾಗಿ ಕಣ್ತೆರೆಯಲು ಯತ್ನಿಸಿ ಸೋಲುತ್ತೇನೆ.

ನಿದ್ದೆ ಆವರಿಸುತ್ತಿದೆ. ನನ್ನ ಧ್ವನಿ ನನಗೇ ಕೇಳಿಸದು.

ಅರೆ ನಿದ್ರಾವಸ್ಥೆಯಲ್ಲಿ ಜೋರೋ ಕೆಮ್ಮಿದ ಶಬ್ದ ಕೇಳುತ್ತದೆ. ಓ, ರಸ್ತೆ ಕೆಲಸದವರು ಬಂದಿದ್ದಾರೆ! ತಮ್ಮ ರಾತ್ರಿಯ ಊಟವನ್ನು ಮರೆತು ನಮ್ಮನ್ನು ನೋಡಲು ಬಂದಿದ್ದಾರೆ...ಯುವಕರು ಮಾತಾಡುತ್ತಿದ್ದಾರೆ. ಥಅ ಉತ್ತರಿಸುತ್ತಾಳೆ. ಅವರು ನೊಳನ್ನು ರೇಗಿಸುತ್ತಾರೆ. ಅವಳು ಸಿಟ್ಟಾಗುತ್ತಾಳೆ. ಅನಂತರ ನಗುತ್ತಾಳೆ. ಮೆಲುದನಿಯಲ್ಲಿ ಹಾಡುತ್ತಾಳೆ.

ನನ್ನ ಗಲ್ಲದ ಮೇಲೆ ಕೂದಲು ಸವರಿದಂತಾಗಿ ರೋಮಾಂಚನ. ಬಿಸಿಯುಸಿರು ತಾಕುತ್ತದೆ. ತಾಯಿಯ ತೊಡೆಯ ಮೇಲೆ ಮಗುವಾಗಿ ಮಲಗಿದಂತೆ. ನನ್ನನ್ನು ತಟ್ಟುತ್ತ ಅಮ್ಮ ಜೋಗುಳ ಹಾಡಿದಂತೆ.

"ಹನಾಯ್‌ನಿಂದ ಜನ ಬಂದಿದ್ದಾರೆ."

ಕಮಾಂಡರ್‌ನ ಬದಲು ಮಾತನಾಡಿದ ಸಂಪರ್ಕಾಧಿಕಾರಿಯ ಧ್ವನಿ. ನಾನೀಗ ಪೂರ್ತಿ ಎಚ್ಚರಾಗುತ್ತೇನೆ. ಈತನೂ ಹನಾಯ್‌ನವನೇ. ಇವನ ತಂದೆ ವಿದ್ಯುತ್‌ಶಿಲ್ಪಿ. ತಾಯಿ ಬಟ್ಟೆಯ ಮಳಿಗೆಯಲ್ಲಿ ಕೆಲಸಮಾಡುತ್ತಾಳೆ. ಓದುತ್ತಿದ್ದಾಗ ಶಾಲೆಗೆ ಚಕ್ಕರ್ ಹಾಕುತ್ತಿದ್ದ. ಪರೀಕ್ಷೆಯಲ್ಲಿ ಬೇಕಾದಷ್ಟು ಕುಂಬಳಕಾಯಿ ಅಂಕಗಳನ್ನು ಪಡೆದಿದ್ದ. ಇಲ್ಲಿಗೆ ಬಂದಾಗ ಒಂದು ಸಲ, ಐದು ಬಾಂಬ್‌ಗಳನ್ನು ಒಟ್ಟಿಗೇ ಕಂದಕಕ್ಕೆ ತಳ್ಳಿ ಅವನ್ನು ಸಿಡಿಸಿಬಿಟ್ಟಿದ್ದ. ಹಾಗಾಗಿ ರಸ್ತೆ ನಾಶವಾಗದೆ ಉಳಿಯಿತು. ಸಭ್ಯಸ್ಥ, ವಾಚಾಳಿ.

ಆದರೆ ಸಿಗರೇಟು ಸೇದುವುದಿಲ್ಲ. ನಾವು ಹುಡುಗಿಯರು ಅವನನ್ನು ಛೇಡಿಸುತ್ತೇವೆ. ನಮ್ಮನ್ನೂ ಅವನು ಸಿಗರೇಟಿನಷ್ಟೇ ದ್ವೇಷಿಸುತ್ತಾನೆ!

"ನಿನ್ನ ಮನಸ್ಸಿಗೆ ಬಂದ ಹುಡುಗಿ ಜತೆ ಹೊರಗೆ ಹೋದಾಗ ಅವಳಿಗೆ ಯಾವ ವೇಷಭೂಷಣ ಇರಬೇಕು? ಸಣ್ಣಗೆ ಕತ್ತರಿಸಿದ ಕೂದಲು, ಸಾಧಾರಣವಾದ್ದೊಂದು ಸೂಟು, ಗಂಡಸರ ಷೂ...ಸಾಕಲ್ಲವಾ?"

ಅವನು ತಲೆಕೆರೆದುಕೊಳ್ಳುತ್ತಾನೆ. ನಾಚಿಕೆಯಿಂದ ಕೆಂಪಗಾಗಿ, "ಪ್ರತಿಯೊಂದು ನಿಯಮಕ್ಕೂ ಲೋಕದಲ್ಲಿ ಅಪವಾದವೊಂದು ಇದ್ದೇ ಇರುತ್ತೆ! ಇದುವರೆಗೂ ನನಗೆ ತಿಳಿದ ಮಟ್ಟಿಗೆ ನನ್ನ ಮನಸ್ಸಿಗೆ ಯಾರೂ ಬಂದಿಲ್ಲ," ಎನ್ನುತ್ತಾನೆ.

ಕಣ್ಣು ತೆರೆಯುತ್ತೇನೆ. ಗುಹೆಯಲ್ಲಾಗಲೇ ಕತ್ತಲು ನುಸುಳಿದೆ. ಒಂದು ಪುಟ್ಟ ಮೋಂಬತ್ತಿ ಉರಿಯುತ್ತಿದೆ. ಚಿಕ್ಕಪ್ಪ "ಹೊ"ನ ದೊಡ್ಡ ಚಿತ್ರವೊಂದನ್ನು ತೂಗುಹಾಕಿದೆ. ಅದಕ್ಕೆ ದಿನಾಗಲೂ ಹೊಸ ಹೂವನ್ನು ಏರಿಸಲಾಗುತ್ತದೆ. ಅರೆ ಬೆಳಕಿನಲ್ಲಿ ಹೂವಿನ ದಳಗಳು ಸ್ಪಷ್ಟವಾಗಿ ಕಾಣುತ್ತಿಲ್ಲ. ಈಗ ಬಂದವರಲ್ಲಿ ಯಾರಾದರೂ ನೀಡಿದ ಪುಷ್ಪಗುಚ್ಛವಿರಬೇಕು. ಸಂಪರ್ಕಾಧಿಕಾರಿ ನೀರು ಕುದಿಸುತ್ತಿದ್ದಾನೆ. ಅವನ ಬೆನ್ನು ಮಾತ್ರ ಕಾಣಿಸುತ್ತಿದೆ-ನಿಲುವುಗನ್ನಡಿಯಂತೆ ಅಗಲವಾದ ಬೆನ್ನು. ಅವನು ಎದ್ದಾಗ ಅವನ ಸಣ್ಣ ನಡು ಗೋಚರಿಸುತ್ತದೆ. ಟೆನ್ನಿಸ್ ಆಟಗಾರನಂತೆ ಕಾಣುತ್ತಾನೆ. ಸ್ನೇಹಶೀಲ, ಚೈತನ್ಯಪೂರ್ಣ.

ಹೊರಗೆ ಟ್ರಕ್ ಸದ್ದು. ಅತ್ಯಾನಂದದ ಕ್ಷಣವಿದು! ನಾನು ಹೊರಗೆ ಹೋಗಬೇಕು. ಕೈಯನ್ನು ನೆಲಕ್ಕೆ ಊರಿ ಭೂಮಿಗೆ ಕಾಲುಗಳನ್ನು ಒತ್ತುತ್ತೇನೆ-ಎದ್ದು ಕೂಡಲು ಸನ್ನಾಹ. ತೊಡೆಯಲ್ಲಿ ಅಸಾಧ್ಯ ನೋವು. ತಲೆ ಸಿಡಿತ. ಕೀಲುಗಳಲ್ಲಿ ನೋವು. ನನ್ನ ಸಾಹಸ ನೋಡಿ ಆತ ಹಾರಿ ಬಂದು ನಾನು ಬೀಳದಂತೆ ಹಿಡಿಯುತ್ತಾನೆ. "ನಿನಗೆ ಹುಚ್ಚು ಹಿಡಿದಿಲ್ಲ ತಾನೆ? ಸುಸ್ತಾದಾಗ ಮಲಗೋದು ಬಿಟ್ಟು..."

"ನಾನು ಹೊರಗೆ ರಸ್ತೆಗೆ ಹೋಗಬೇಕು".

"ರಸ್ತೆಗೆ!"

(7ನೇ ಪುಟ ನೋಡಿ)

ತುಮಕೂರು ಜಿಲ್ಲಾ ಸಮ್ಮೇಳನ

11-11-81ರಂದು ಬೆಳಗ್ಗೆ ಶಿರಾದಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ತುಮಕೂರು ಜಿಲ್ಲಾ ಸಮ್ಮೇಳನ ನಡೆಯಿತು. ಕಾಂ. ಯೂನುಸ್ ಖಾನರು ಧ್ವಜಾರೋಹಣ ಮಾಡುವ ದರೊಂದಿಗೆ ಸಮ್ಮೇಳನ ಪ್ರಾರಂಭವಾಯಿತು.

ಪಕ್ಷದ ಶಿರಾ ನಗರಸಮಿತಿಯ ಕಾರ್ಯದರ್ಶಿ ಕಾಂ. ಹಬೀಬುಲ್ಲಾ ಅವರು ಸಮ್ಮೇಳನಕ್ಕೆ ಆಗಮಿಸಿದ್ದ ಪ್ರತಿನಿಧಿಗಳನ್ನು ರಾಜ್ಯಸಮಿತಿಯ ಮುಖಂಡರುಗಳನ್ನು ಸ್ವಾಗತಿಸಿದರು. ಅಧ್ಯಕ್ಷ ಮಂಡಲಿಯಲ್ಲಿ ಕಾಂ. ಕೆ. ಆರ್. ನಾಯಕ್, ಕಾಂ. ದಸ್ತಗೀರ್‌ಸಾಬ್ ಇವರುಗಳಿದ್ದರು.

ಆರಂಭದಲ್ಲಿ ಸೆಪ್ಟೆಂಬರ್ ತಿಂಗಳಿನಲ್ಲಿ ನಿಧನರಾದ ಪಕ್ಷದ ಪೊಲಿಟ್ ಬ್ಯೂರೋ ಸದಸ್ಯ ಕಾಂ. ಎ. ಬಾಲಸುಬ್ರಮಣ್ಯಂ ಮತ್ತು ಇತ್ತೀಚೆಗೆ ನಿಧನರಾದ ಕನ್ನಡ ವರಕವಿ ದ. ರಾ. ಬೇಂದ್ರೆಯವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಪಕ್ಷದ ರಾಜ್ಯ ಸೆಕ್ರೆಟಾರಿಯೇಟ್ ಸದಸ್ಯ ಕಾಂ. ಸಿ. ನಂಜುಂಡಪ್ಪನವರು ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿ ರಾಷ್ಟ್ರೀಯ, ಅಂತರ್‌ರಾಷ್ಟ್ರೀಯ ಪರಿಸ್ಥಿತಿಯ ಕುರಿತು ವಿವರಿಸಿದರು. ರಾಜ್ಯಸಮಿತಿಯ ಸದಸ್ಯ ಕಾಂ. ಎಂ. ಎನ್. ಉಗ್ರಪ್ಪನವರು ಪಕ್ಷದ ಕರ್ತವ್ಯಗಳ ಕುರಿತು ಮಾತನಾಡಿದರು.

ಕಾರ್ಯದರ್ಶಿ ಕಾಂ. ಎಚ್. ಸಿ. ಚನ್ನಪ್ಪನವರು ಸಮ್ಮೇಳನಕ್ಕೆ ವರದಿ ಮಂಡಿಸಿದರು. ವರದಿಯ ಮೇಲೆ ಸುದೀರ್ಘ ಚರ್ಚೆ ನಡೆದು ಕೆಲವು ತಿದ್ದುಪಡಿಗಳೊಂದಿಗೆ ವರದಿಯನ್ನು ಅಂಗೀಕರಿಸಲಾಯಿತು.

ನಂತರ ಕಾಂ. ಕೆ. ಆರ್. ನಾಯಕ್ ಅವರು ಕಾರ್ಯದರ್ಶಿಯುಳ್ಳ ಹಾಗೂ ಕಾಂ. ಟಿ. ಕೆ. ಗೋವಿಂದರಾಜು, ಬಿ. ಡಿ. ರಾಮಯ್ಯ, ಯತಿರಾಜು, ಎಚ್. ಸಿ. ಚನ್ನಪ್ಪ, ಬಡೇಸಾಬ್ ಮತ್ತು ಕಾಂ. ಮುಹಮ್ಮದ್ ದಸ್ತಗೀರ್ ಇವರುಗಳು ಸದಸ್ಯರಾಗುಳ್ಳ ಜಿಲ್ಲಾಸಮಿತಿಯನ್ನು ಚುನಾಯಿಸಲಾಯಿತು.

ನಿರ್ಣಯಗಳು

1) ಅಗತ್ಯಸೇವಾ ಮಸೂದೆ, ರಾಷ್ಟ್ರೀಯ ಭದ್ರತಾ ಶಾಸನಗಳನ್ನು ಖಂಡಿಸುವ ಮತ್ತು ಇವುಗಳನ್ನು ವಾಪಸ್ ತೆಗೆಯುವಂತೆ ಸಮ್ಮೇಳನ ಒತ್ತಾಯಿಸಿತು.

2) 1981 ಏಪ್ರಿಲ್‌ನಿಂದಲೇ ಬೀಡಿ ಕಾರ್ಮಿಕರ ಕನಿಷ್ಠ ವೇತನ ಜಾರಿಗೊಳಿಸಬೇಕು.

3) ಕೃಷಿ ಉತ್ಪನ್ನಗಳಿಗೆ ನ್ಯಾಯ ಬೆಲೆ ಸಿಗಬೇಕು.

4) ಬರಗಾಲ ಪೀಡಿತ ತುಮಕೂರು ಜಿಲ್ಲೆಗೆ ಹೇಮಾವತಿ, ಭದ್ರಾ ನಾಲಾ ನೀರು ದೊರೆಯುವಂತೆ ಕ್ರಮ ಕೈಗೊಳ್ಳಬೇಕು.

5) ಕಾರ್ಪೊರೇಷನ್ ಮತ್ತು ನಗರಸಭೆಗಳಿಗೆ ನಾಮಕರಣ ಮಾಡುವ ಸರಕಾರದ ಕ್ರಮವನ್ನು ಸಮ್ಮೇಳನ ತೀವ್ರವಾಗಿ ಖಂಡಿಸಿದೆ.

ಭೂನ್ಯಾಯ ಮಂಡಳಿಗಳಲ್ಲಿ ನಡೆಯುತ್ತಿರುವ ಭ್ರಷ್ಟಾಚಾರ ಖಂಡಿಸುವ, ಗೋಕಾಕ್ ಸಮಿತಿಯ ವರದಿಯನ್ನು ಜಾರಿಗೊಳಿಸುವಂತೆ ಒತ್ತಾಯಿಸುವ... ಈ ಮುಂತಾದ ನಿರ್ಣಯಗಳನ್ನು ಅಂಗೀಕರಿಸಲಾಯಿತು.

ಬಹಿರಂಗ ಸಭೆ

12-11-81ರ ಸಾಯಂಕಾಲ ಶಿರಾದಲ್ಲಿ ಬೃಹತ್ ಬಹಿರಂಗ ಸಭೆ ನಡೆಸಲಾಯಿತು. ಆರಂಭದಲ್ಲಿ ಬೃಹತ್ ಮೆರವಣಿಗೆ ಹೊರಡಿಸಲಾಯಿತು.

ಸಭೆಯನ್ನುದ್ದೇಶಿಸಿ ಕಾಂ. ಸೂರ್ಯನಾರಾಯಣರಾವ್, ಇಕ್ಬಾಲ್ ಹುಸೇನ್, ಮುಹಮ್ಮದ್ ದಸ್ತಗೀರ್ ಮೊದಲಾದವರು ಮಾತನಾಡಿದರು. ಸಭೆಯ ಅಧ್ಯಕ್ಷತೆಯನ್ನು ಕಾಂ. ಎಚ್. ಸಿ. ಚನ್ನಪ್ಪನವರು ವಹಿಸಿದ್ದರು. ಕೊನೆಯಲ್ಲಿ ಕಾಮ್ರೇಡ್ ಫಯಾಜ್ ಅಹಮ್ಮದ್ ವಂದಿಸಿದರು.

ಸಭೆಗೆ ಮೊದಲು ಎಸ್.ಎಫ್.ಐ. ಸಂಗಾತಿಗಳಾದ ಕಾಂ. ಗಂಗಾಧರ ಮತ್ತು ಕಾಂ. ಮಾರಣ್ಣ ಇವರುಗಳು ಕ್ರಾಂತಿಗೀತೆ ಹಾಡಿದರು.

●

ಚಿತ್ರದುರ್ಗ ಜಿಲ್ಲಾ ಸಮ್ಮೇಳನ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯಸಮ್ಮೇಳನದ ಪೂರ್ವಭಾವಿಯಾಗಿ ಚಿತ್ರದುರ್ಗ ಜಿಲ್ಲಾ ಸಮ್ಮೇಳನವು ಹರಿಹರದಲ್ಲಿ 14-11-81 ರಂದು ನಡೆಯಿತು. ಸಮ್ಮೇಳನಕ್ಕೆ ವಿಶೇಷ ಆಹ್ವಾನಿತರಾಗಿ ಪಕ್ಷದ ರಾಜ್ಯ ಸೆಕ್ರೆಟಾರಿಯೇಟ್ ಸದಸ್ಯರಾದ ಕಾಂ. ಎಸ್. ಸೂರ್ಯನಾರಾಯಣರಾವ್ ಮತ್ತು ಕಾಂ. ವಿಜೆಕೆ ನಾಯರ್ ಆಗಮಿಸಿದ್ದರು.

ಕಾಂ. ಡಿ. ಜಿ. ಜೋಷಿಯವರು ಸಮ್ಮೇಳನಕ್ಕೆ ವರದಿ ಮಂಡಿಸಿದರು. ವರದಿ ಮೇಲೆ ನಡೆದ ಚರ್ಚೆಯಲ್ಲಿ ಕಾಂ. ಪಾಟೀಲ್, ಷಣ್ಮುಖಪ್ಪ, ಪಠಾಣ, ಅಂಗಡಿ ಮತ್ತು ಕಾಂ. ರೋಖಡೆಯವರು ಪಾಲ್ಗೊಂಡಿದ್ದರು. ಸುದೀರ್ಘ ಚರ್ಚೆ ನಡೆದು ಕೆಲವು ತಿದ್ದುಪಡಿಗಳೊಂದಿಗೆ ವರದಿ ಅಂಗೀಕಾರವಾಯಿತು. ಕಾಂ. ಸೂರ್ಯನಾರಾಯಣರಾವ್ ಮತ್ತು ವಿಜೆಕೆ ನಾಯರ್ ಸಮ್ಮೇಳನದುದ್ದಕ್ಕೂ ಮಾರ್ಗದರ್ಶನ ನೀಡಿದರು.

ಕೊನೆಯಲ್ಲಿ ಕಾಂ. ಇಕ್ಬಾಲ್ ಹುಸೇನ್, ಡಿ. ಜಿ. ಜೋಷಿ, ಗೋವಿಂದಪ್ಪ, ಭೀಮಪ್ಪರೆಡ್ಡಿ, ಆರ್. ಸಿ. ಉನ್ನಿತ್ತನ್, ಕೊಟ್ರೇಶ್ವರಯ್ಯ, ಆರ್. ಬಿ. ಅಂಗಡಿ, ಮುರಗೇಶನ್, ಎಸ್. ಪಿ. ಭಾಸ್ಕರ್, ಜಯಣ್ಣ ಇವರುಗಳುಳ್ಳ ರೀಜನಲ್ ಕಮಿಟಿಯನ್ನು ಆಯ್ಕೆಮಾಡಿ ಕಾಂ. ಇಕ್ಬಾಲ್ ಹುಸೇನ್‌ರನ್ನು ಕಾರ್ಯದರ್ಶಿಯಾಗಿ ಚುನಾಯಿಸಲಾಯಿತು.

ನಿರ್ಣಯಗಳು

1. 23ರಂದು ನಡೆಯಲಿರುವ ದೆಹಲಿ ಚಲೋ ಕಾರ್ಯಕ್ರಮವನ್ನು ಯಶಸ್ವಿಗೊಳಿಸುವುದು.

2. ಹರಿಹರ ನಗರದಲ್ಲಿ ನಾಗರಿಕ ಸೌಲಭ್ಯ ಕಲ್ಪಿಸಲು ನಗರಸಭೆಗೆ ಒತ್ತಾಯಿಸುವುದು.

3. ಬಿನ್ನಿ ಕಾರ್ಖಾನೆ ಮುಚ್ಚದಂತೆ ಸರಕಾರಕ್ಕೆ ಒತ್ತಾಯಿಸುವ ಮತ್ತು ಗೋಕಾಕ್ ಸಮಿತಿಯ ವರದಿಯನ್ನು ಜಾರಿಗೊಳಿಸುವಂತೆ ಸರಕಾರಕ್ಕೆ ಒತ್ತಾಯಿಸುವುದು... ಈ ಮೊದಲಾದುವುಗಳು.

ಬಹಿರಂಗ ಸಭೆ

ಅಂದು ಸಂಜೆ 6 ಘಂಟೆಗೆ ಬಹಿರಂಗ ಸಭೆ ನಡೆಸಲಾಯಿತು. ಆರಂಭದಲ್ಲಿ ಕಾಂ. ಡಿ. ಜಿ. ಜೋಷಿ ಸ್ವಾಗತಿಸಿದರು. ಕಾಂ. ಸೂರ್ಯನಾರಾಯಣರಾವ್ ಮತ್ತು ಕಾಂ. ವಿಜೆಕೆ ನಾಯರ್ ಸಭೆಯನ್ನುದ್ದೇಶಿಸಿ ಮಾತನಾಡಿದರು. ಸಭೆಯ ಅಧ್ಯಕ್ಷತೆಯನ್ನು ಕಾಂ. ಇಕ್ಬಾಲ್ ಹುಸೇನ್ ವಹಿಸಿದ್ದರು.

○

ಬಂಡೇಕಲ್ಲು ಸರಕಾರಕ್ಕೂ ತೂತು ಬಿತ್ತೇ?

(3ನೇ ಪುಟದಿಂದ)

ಹಾಗೆಯೇ ಈ ಘಟನೆಗೆ ಸಂಬಂಧಪಟ್ಟಂಥ ನರಗುಂದ-ನವಲಗುಂದ ಹಾಗೆಯೇ ಬಿಜಾಪುರ, ರಾಯಚೂರ ಜಿಲ್ಲೆಗಳಲ್ಲೂ ಕೋರ್ಟಿನಲ್ಲಿರುವ ದಾವೆಗಳನ್ನೆಲ್ಲ ಸರಕಾರ ವಾಪಸ್ ಪಡೆದು ಆಡಳಿತ ಸುಧಾರಿಸುವ ದೃಷ್ಟಿಯಿಂದ ಸಂಬಂಧಪಟ್ಟ ಅಧಿಕಾರಿಗಳು, ಮಂತ್ರಿಗಳ ಮೇಲೆ ಉಗ್ರಕ್ರಮ ಕೈಗೊಳ್ಳುವುದಗತ್ಯ.

ಕೆ. ಎಚ್. ಪಾಟೀಲ ವರದಿ

ಸಹಕಾರಿ ಸಂಘಗಳ ಕಾಯಿದೆಗೆ ತಿದ್ದುಪಡಿ ಸೂಚಿಸಲು ಕೆ. ಎಚ್. ಪಾಟೀಲ ಸಮಿತಿ ನೇಮಿಸಿದ್ದು ಅದರ ವರದಿ ಸರಕಾರದ ಕೈಸೇರಿತು. ಹಿಂದುಳಿದವರಿಗೆ, ಮಹಿಳೆಯರಿಗೆ ಪ್ರಾತಿನಿಧ್ಯ, ಚೇರ್ಮನ್ ಹುದ್ದೆಯ ಅಧಿಕಾರವನ್ನು 6 ವರ್ಷಕ್ಕೇ ಮಿತಿಗೊಳಿಸಬಾರದು, ಚಿಕ್ಕ ಸಹಕಾರಿ ಸಂಘಗಳ ವಿಲೀನವನ್ನು ರದ್ದುಗೊಳಿಸುವ-ಹೀಗೆ ಅತಿ ಕ್ಷುಲ್ಲಕ ಸೂಚನೆಗಳನ್ನಷ್ಟೇ ಪಾಟೀಲ ವರದಿ ಒಳಗೊಂಡಿದೆ.

ಸಹಕಾರಿ ಸಂಘಗಳು ಹಲವಾರು ಬಗೆಯ ಭ್ರಷ್ಟಾಚಾರ, ಅನೈತಿಕ ವ್ಯವಹಾರ, ವ್ಯಕ್ತಿಪೂಜೆಗಳಿಗೆಲ್ಲ ಬಲಿಬಿದ್ದಿರುವಾಗ, ಇವುಗಳನ್ನೆಲ್ಲ ನಿವಾರಿಸಿ ಸಹಕಾರಿ ಸಂಘಗಳು ನಿಜವಾಗಿಯೂ ಜನತೆಯ ಸೇವಕರಾಗಿ ಸೇವೆಸಲ್ಲಿಸುವಂತೆ ಮಾಡಲು ಕಾಯಿದೆಯಲ್ಲೂ, ಪ್ರಾತಿನಿಧ್ಯದಲ್ಲೂ, ಮೇಲ್ವಿಚಾರಣೆಯಲ್ಲೂ ಆಮೂಲಾಗ್ರ ಬದಲಾವಣೆ ಸೂಚಿಸಬೇಕಾಗಿತ್ತು. ಬಂಡವಾಳಶಾಹಿ ಅಚ್ಚುಕಟ್ಟಿನಲ್ಲಿ, ಅದೇ ವಿಚಾರಧಾರೆಯ ವ್ಯಕ್ತಿ ಸಹಕಾರಿ ಚಳುವಳಿಗೆ ಹೊಸ ಸ್ವರೂಪಕೊಡಲು ಸಾಧ್ಯವಿಲ್ಲ. ಮಂತ್ರಿಗಳೂ, ಅಧಿಕಾರಿಗಳೂ ಭ್ರಷ್ಟಾಚಾರದ ರಥದಲ್ಲೇ ಮೆರೆಯುತ್ತಿರುವಾಗ, ಒಬ್ಬ ಮಹಿಳೆ, ಒಬ್ಬ ಹರಿಜನ ನಿಷ್ಠಾವಂತರಿದ್ದರೂ ಅಧಿಕಾರಶಾಹಿಯ ಬಿರುಗಾಳಿಯಿಂದ ಪಾರಾಗಲು ಶಕ್ಯವಿಲ್ಲ.

ದೊಡ್ಡ ಗುಲ್ಲೆಬ್ಬಿಸಿದ ಪಾಟೀಲ ವರದಿ ಆಳುವವರಿಗೆ ಗಲ್ಲಾಪೆಟ್ಟಿಗೆಯಾಗಿಯೇ ಉಳಿಯುತ್ತದೆ. ಅದರ ಸಂಪೂರ್ಣ ಬದಲಾವಣೆಗೆ ಹೋರಾಡೋಣ. ●

ಸಂಘ ಪ್ರಾರಂಭಿಸಿದ್ದಕ್ಕೆ ಕೆಲಸದಿಂದ ವಜಾ

ಹುಬ್ಬಳ್ಳಿ-ಧಾರವಾಡ ಮಾರ್ಗದ ಮಧ್ಯೆ ಘೋರುಕಾ ಟೆಕ್ಸ್‌ಟೈಲ್ಸ್ ಎಂಬ ಫ್ಯಾಕ್ಟರಿಯೊಂದಿದೆ. ಇಲ್ಲಿ 600 ಕಾರ್ಮಿಕರು ಕೆಲಸಮಾಡುತ್ತಿದ್ದಾರೆ. ನಾಲ್ಕು ವರ್ಷಗಳ ಹಿಂದೆ ಪ್ರಾರಂಭವಾದ ಈ ಫ್ಯಾಕ್ಟರಿ ಇತ್ತೀಚೆಗೆ ತಾನೇ ಉತ್ಪಾದನೆಯನ್ನು ಪ್ರಾರಂಭಿಸಿದೆ.

ಇಲ್ಲಿ ಕೆಲಸಮಾಡುತ್ತಿರುವ ಕಾರ್ಮಿಕರ ಸ್ಥಿತಿಗತಿಗಳು ತುಂಬ ಶೋಚನೀಯ. ಸಂಬಳ ಕೊಡುವಾಗಲೂ ಕಾರ್ಮಿಕರ ಕಾರ್ಮಿಕರ ಮಧ್ಯೆ ವಿರಸ ಜೀವಂತವಾಗಿರುವುದಕ್ಕೆ ತುಂಬ ತಾರತಮ್ಯವಿದೆ. ಪ್ರಾಥಮಿಕ ಸೌಲಭ್ಯಗಳೂ ಇಲ್ಲಿಲ್ಲ. ಕ್ಯಾಂಟೀನ ಪರಿಸ್ಥಿತಿಯಂತೂ ತುಂಬಾ ಹೊಲಸು.

ತಮ್ಮ ಸ್ಥಿತಿಗತಿಗಳ ಸುಧಾರಣೆಗೋಸ್ಕರ ಸಂಘಟಿತರಾಗುವದೊಂದೇ ಉಳಿದ ದಾರಿ ಎಂದು ಮನಗಂಡ ಕಾರ್ಮಿಕರು ಯೂನಿಯನ್ನನ್ನು ಪ್ರಾರಂಭಿಸಿದ್ದಾರೆ.

ಆಡಳಿತವರ್ಗದವರು ಅಸ್ತಿತ್ವಕ್ಕೆ ಬಂದ ಯೂನಿಯನ್‌ನೊಟ್ಟಿಗೆ ಸೌಹಾರ್ದ ಮಾತುಕತೆಯ ಮೂಲಕ ಸಮಸ್ಯೆಗಳನ್ನು ಇತ್ಯರ್ಥಪಡಿಸುವ ಬದಲು ಯೂನಿಯನ್ನಿನ ಸಕ್ರಿಯ ಕಾರ್ಯಕರ್ತರನ್ನು ಕೆಲಸದಿಂದ ವಜಾಮಾಡುತ್ತಿದ್ದಾರೆ. ಆಡಳಿತವರ್ಗದ ಪ್ರಚೋದಕಾರಿ ಧೋರಣೆಯಿಂದಾಗಿ ಕಾರ್ಮಿಕರು ಮುಷ್ಕರ ಹೂಡುವುದು ಅನಿವಾರ್ಯವಾಗಿದೆ.

ಸಂಘದ ಉಪಾಧ್ಯಕ್ಷರಾದ ಎಂ. ರಾಮರಾವ್ ಅವರು ಹೇಳಿಕೆಯೊಂದನ್ನು ಹೊರಡಿಸಿ ಬೆಂಬಲಿಸುವಂತೆ ಕೇಳಿದ್ದಾರೆ.

○

ಸ್ಥಳೀಯ ಸಮಿತಿಗಳಿಗೆ ನೇಮಕ ಮಾಡುವ ಸುಗ್ರೀವಾಜ್ಞೆ :

ಪಕ್ಷದ ಖಂಡನೆ

ನಗರಸಭೆ, ಕಾರ್ಪೊರೇಷನ್‌ಗಳಿಗೆ ಮೇಯರ್, ಉಪಮೇಯರ್, ಕೌನ್ಸಿಲರುಗಳನ್ನು ನಾಮಕರಣ ಮಾಡುವ ಅಧಿಕಾರವನ್ನು ಪಡೆಯುವದಕ್ಕೆ ಸಂಬಂಧಿಸಿದಂತೆ ಇದೀಗ ಸರಕಾರ ತುರ್ತು ಶಾಸನವನ್ನು ಹೊರಡಿಸಿದೆ.

ಹಲವಾರು ವರುಷಗಳಿಂದ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಸದೇ ಇದ್ದ ಸರಕಾರ ಜನತೆಯ ಒತ್ತಾಯವನ್ನು ಧಿಕ್ಕರಿಸಿ ತನ್ನ ಸರ್ವಾಧಿಕಾರಿ ನೀತಿಯನ್ನು ಪ್ರದರ್ಶಿಸಿದೆ. ತಮ್ಮ ಪಕ್ಷದವರನ್ನೇ ನಗರಸಭೆ, ಕಾರ್ಪೊರೇಷನ್‌ಗಳಲ್ಲಿ ತುಂಬಿಸುವ ಕುತಂತ್ರವಿದಾಗಿದೆ.

ಸರಕಾರದ ಈ ಸರ್ವಾಧಿಕಾರಿ ಧೋರಣೆಯನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ತೀವ್ರವಾಗಿ ಖಂಡಿಸಿದೆ. ಸರಕಾರದ ಧೋರಣೆಯ ವಿರುದ್ಧ ಎಲ್ಲ ವಿರೋಧ ಪಕ್ಷಗಳೂ, ಪ್ರಜಾಪ್ರಭುತ್ವ ಪ್ರೇಮಿಗಳೂ ಹೋರಾಟಕ್ಕೆ ಸಿದ್ಧರಾಗುವಂತೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯ ಸೆಕ್ರೆಟಾರಿಯೇಟ್ ಸದಸ್ಯ ಕಾಂ. ಎನ್. ಎಲ್. ಉಪಾಧ್ಯಾಯ ಮನವಿ ಮಾಡಿದ್ದಾರೆ.

ಈ ಕುರಿತು ಸಿ.ಪಿ.ಐ.(ಎಂ) ದ.ಕ. ಜಿಲ್ಲಾ ಸಮಿತಿಯ ಕಾರ್ಯದರ್ಶಿ ಕಾಂ. ಕೆ. ಆರ್. ಶ್ರೀಯಾನ್ ಅವರು ಹೇಳಿಕೆಯೊಂದನ್ನು ಹೊರಡಿಸಿ ಸರಕಾರದ ಧೋರಣೆಯನ್ನು ತೀವ್ರವಾಗಿ ಖಂಡಿಸಿದ್ದಾರೆ.

○

ದೂರದ ತಾರೆಗಳು

(5ನೇ ಪುಟದಿಂದ)

ಅವನು ಗಟ್ಟಿಯಾಗಿ ನಗುತ್ತಾನೆ. ನಕ್ಕಾಗ ದಟ್ಟವಾದ ಹುಬ್ಬುಗಳು ಬಳಿ ಸಾರುತ್ತವೆ. ತೆಳುವಾದ ತುಟಿಗಳ ನಡುವೆ ಅಕ್ಕಿಕಾಳಿನಂಥ ದಂತಪಂಕ್ತಿ ಮಿನುಗುತ್ತದೆ.

"ನೀನು ಎಲ್ಲಿಗೂ ಹೋಗಬೇಕಾಗಿಲ್ಲ. ಸುಮ್ಮನೆ ಹೇಳಿದ ಹಾಗೆ ಕೇಳು. ಮಲಕ್ಕೋ".

"ಮಲಕ್ಕೊಳ್ಳೋದು? ಏನ ಗೆಲ್ಲೋ ಹುಚ್ಚು!"

ನಾನು ದ್ವಾರದ ಕಡೆ ಕುರುಡಿಯಂತೆ ತಡಕಾಡುತ್ತ ಹೊರಡುತ್ತೇನೆ. ಈ ಸಂಭ್ರಮ ನನಗೊಬ್ಬಳಿಗೆ ಮಾತ್ರವಲ್ಲ. ನೂ ಆಗಲೇ ಮಾಯವಾಗಿಬಿಟ್ಟಿದ್ದಾಳೆ. ಥಳಗುತ್ತೂ ಹುಚ್ಚು ಹುಮ್ಮಸ್ಸು. ಅವಳ ಕಿಲಕಿಲ ನಗು ಬೆಟ್ಟದ ಮೇಲಿಂದ ಕೇಳುತ್ತಿದೆ ನನಗೆ. ಸುರಂಗಕಾರರ ಗುಂಪಿನ ಮಧ್ಯೆ ನೂಳ ಧ್ವನಿಯನ್ನು ಗುರುತಿಸಿ ಅತ್ತ ನಡೆಯುತ್ತೇನೆ. ಮಧ್ಯರಾತ್ರಿಯಾಗಿದೆಯೆಂದು ತಿಳಿಸುತ್ತಾಳೆ. ಬೆಂಗಾವಲು ಪಡೆ ಬರಲಿದೆಯಂತೆ. ನಾನು ನಿದ್ರೆಯಲ್ಲಿದ್ದಾಗ ಬೆಟ್ಟದ ಮೇಲೆ ಬಾಂಬ್‌ಗಳು ಬಿದ್ದುವಂತೆ. ನಮ್ಮ ಸೈನ್ಯದಳದ ನೆರವಿನಿಂದಾಗಿ ಯಾವ ಅನಾಹುತವೂ ನಡೆದಿರಲಿಲ್ಲ.

ಬೆಟ್ಟದ ಮೇಲಿಂದ ಬುಲ್‌ಡೋಜರುಗಳ ಗರ್ಜನೆ ಕೇಳುತ್ತದೆ. ಗುದ್ದಲಿ, ಸನಿಕೆಗಳ ಸದ್ದು, ಆಗೊಮ್ಮೆ ಈಗೊಮ್ಮೆ ನಗು, ನಡುನಡುವೆ ಆಸ್ಫೋಟನೆಗಳು.

ನಮ್ಮ ನೆತ್ತಿಯ ಮೇಲೆ ಆಕಾಶದಲ್ಲಿ ನಕ್ಷತ್ರಗಳು ಕಣ್ಮಿಟುಕಿಸುತ್ತಿವೆ ದೂರದ ತಾರೆಗಳು-ಪಚ್ಚೆಯ ನೀರಿನ ಬಿಂದುಗಳಂತೆ ನಿರ್ಮಲ, ಬಾನು ಅನಂತವಾದ ಕಪ್ಪಾನು. ಅದರಿಂದ ತೂಗುಬಿಟ್ಟ ದೀಪ್ತಿಗಳು ಈ ತಾರಗೆಗಳು.

ನನಗೆ ಥಟ್ಟನೆ ಕವಿತೆಯೊಂದು ನೆನಪಾಗುತ್ತದೆ. ಗೋಲಂದಾಜು ದಳಕ್ಕೆ ಸೇರಿದವನೊಬ್ಬನು ಬರೆದದ್ದು. ಪಡೆಯೊಂದು ಗುಹೆಯ ಮುಂದೆ ಹಾದು ಹೋಪಾಗ ನಮ್ಮ ಕಡೆ ಎಸೆದದ್ದು. ನಮಗೆ ಅರ್ಪಿತವಾದದ್ದು. ಅದರಲ್ಲಿ ನಮ್ಮನ್ನು "ಬೆಟ್ಟದ ಮೇಲಣ ದೂರದ ತಾರೆ"ಗಳೆಂದು ಸಂಬೋಧಿಸಿದ್ದ. ಮಿನುಗುವ ತಾರೆಗಳು ಎಂದಿರಬೇಕಿತ್ತೇನೋ. "ದೂರದ" ತಾರೆಗಳೇ ನಾವು? ನಮ್ಮ ನಮ್ಮಲ್ಲೇ ಈ ಕುರಿತು ಚರ್ಚೆ ನಡೆಯಿತು. ಕಡೆಗೆ ನಾವು ಅಂದುಕೊಂಡೆವು. ಆ ಪದ್ಯದ ಸೌಂದರ್ಯವನ್ನು ಹೆಚ್ಚಿಸಲೆಂದೇ ಆತ ಹಾಗೆ ಬರೆದಿದ್ದಿರಬೇಕು. ಆ ಕವಿಯನ್ನು ನೋಡಲೇನೋ ನನಗೆ ಆಸೆ ಇದೆ. ಆದರೆ ಆತ ಈಗಾಗಲೇ ದೂರದವನಾಗಿದ್ದಾನೆ...

ಬೆಂಗಾವಲು ಪಡೆ ಸರಿಯಾಗಿ ಮಧ್ಯರಾತ್ರಿಗೆ ಬರುತ್ತದೆ. ಇಡೀ ರಸ್ತೆ ಜೀವಂತವಾಗುತ್ತದೆ. ಗಲಗಲಗಲಾಟೆ. ಐದನೇ ವಾಹನದ ಚಾಲಕ ಪ್ರಶ್ನಿಸುತ್ತಾನೆ. "ಏ ಹನಾಯ್ ಹುಡುಗಿಯರೇ, ಅಮ್ಮ ಇಲ್ಲದೆ ಬೇಜಾರಾಗಿದೆಯಾ?"

ನೂ ಉಸುರುತ್ತಾಳೆ, "ಕ್ವಾಂಗ್ ಟ್ರಿಂಗ್ ರೆಜಿಮೆಂಟಿನ ಥುಂಗ್ ಇರಬೇಕು." ಅವಳ ತೋಳಿಗೆ ಕಟ್ಟಿದ ಬಿಳಿಯ ಬ್ಯಾಂಡೇಜು ಹಾಗೇ ಇದೆ. ಮುಂಚಿನಂತೆಯೇ ಮೌನಿ. ದುಂಡಗಾದ ತನ್ನ ಮುಖದ ಮೇಲಿನ ನೀಳ ಮೂಗನ್ನು ನೇರವಾಗಿಸಿಕೊಂಡು ನನಗೆ ಒರಗುತ್ತಾಳೆ. ಈಗ ಚೇತರಿಸಿಕೊಂಡು ಐಸ್‌ಕ್ರೀಮು ಕೆನೆಯಂತೆ ಕಂಗೊಳಿಸುತ್ತಾಳೆ.

ಅವಳೆರಡು "ಆಸ್ಪತ್ರೆಗೆ ಹೋಗುಂತ ಹೇಳಿದರು. ದಿನಾಗಲೂ ಇಂಜೆಕ್ಷನ್, ಮಾತ್ರೆಗಳು, ಗಂಜಿ... ಜಾಸ್ತಿ ತಿನ್ನಬೇಕು, ಹಾಸಿಗೆ ಮೇಲೆ ಮಲಗಿರಬೇಕು...ಸದ್ಯ! ಈ ಠೀವಿ ಯಾರಿಗೆ ಬೇಕಾಗಿದೆ! ನನ್ನನ್ನ ಆಸ್ಪತ್ರೆಗೆ ಎಳಕೊಂಡು ಹೋಗೇಬಿಡ್ತಿದ್ರು. ನಾನು ಅವರಿಗೆ ಮೋಸ ಮಾಡಿ ಉಳಕೊಂಡೆ. ನೆನಸಿಕೊಂಡ್ರೆ ಈಗಲೂ ಭಯವಾಗುತ್ತೆ...ಫುಯ್!"

ನಾನು ಅವಳನ್ನು ಆಂಬ್ಯುಲೆನ್ಸಿಗೆ ದೂಡಿಬಿಡುವೆನೋ ಎಂಬಂತೆ ನನ್ನ ಕಡೆ ತಿರುಗುತ್ತಾಳೆ. ಬಳಿಗೆ ಸುರಂಗಕಾರನೊಡನೆ ಮಾತಿನಲ್ಲಿ ತೊಡಗುತ್ತಾಳೆ, ಕಾಡಿನ ಆಚೆ ಅವನು ಕಂಡ ಬೀಳುವ ನಕ್ಷತ್ರದ ಕುರಿತು ಅವರ ಮಾತು.

ಎದೆಯ ಮೇಲೆ ಕೈಗಳನ್ನು ಮಡಿಸಿಕೊಂಡು ಬೇರೆಯಾಗಿ ನಿಲ್ಲುತ್ತೇನೆ. ನಾನು ಯುವಕರನ್ನು ನೋಡುತ್ತಿಲ್ಲ. ಟ್ರಕ್‌ಗಳತ್ತ ದಿಟ್ಟಿಸುತ್ತೇನೆ. ಹಾವಭಾವಗಳು ಎಂದಿನಂತೆ. ಆದರೆ ಬೇರೆ ರೀತಿಯಲ್ಲಿ. ವರ್ಣಿಸುವುದು ಹೇಗೆ? ಅದೂ ಬೆಟ್ಟದ ಮೇಲಿರುವ ಪ್ರತಿಯೊಬ್ಬ ಹೋರಾಟಗಾರನ ಬಳಿಗೂ ಓಡಿ ಸಂತೋಷದಿಂದ ಬಿಕ್ಕುತ್ತ ಅಳತೊಡಗುವುದು ಈ ಕ್ಷಣದಲ್ಲಿ ನನ್ನಿಂದ ಸಾಧ್ಯವಿಲ್ಲ. ನಿಜವಾಗಿಯೂ ಸಾಧ್ಯವಿಲ್ಲ. ಆದರೆ ನನ್ನ ಹೃದಯದಲ್ಲಿ ಈ ಕ್ಷಣ ಯೌವನ, ಉತ್ಸಾಹ, ಆನಂದ ಇವೆಲ್ಲ ನೂರು ಮೊಗ್ಗುಗಳ ಒಂದು ಗುಚ್ಛವಾಗಿ ನಸುಬಿರಿದು ಗಾಳಿಗೆ ಮೆಲ್ಲಗೆ ತೂಗಿ ಕಂಪನ್ನು ಸುತ್ತಲೂ ಹರಡುತ್ತದೆ. ಎಲ್ಲರಿಗಾಗಿ ಪ್ರೇಮ ನನ್ನಲ್ಲಿ ತುಂಬಿ ತುಳುಕುತ್ತಿದೆ. ಈ ಪ್ರೇಮಕ್ಕೆ ನಾಲಿಗೆಯಿಲ್ಲ, ಭಾಷೆಯಿಲ್ಲ. ನನ್ನ ಹಾಗೇ ಇಂಥ ಬೆಟ್ಟಗಳಲ್ಲಿ ಬದುಕುವವರಿಗೆ ಮಾತ್ರ ಅರ್ಥವಾದೀತು ಅದೇನೆಂದು.

ಬೆಂಗಾವಲು ಪಡೆ ರಸ್ತೆಯ ಮೇಲೆ ಸಾಲಾಗಿ ಹರಡಿಕೊಳ್ಳುತ್ತದೆ. ಎಲ್ಲಾ ದೀಪಗಳೂ ನಂದಿವೆ, ಮರೆಮಾಚಲು ಕಟ್ಟಿದ ಹಸಿರು ಬಣ್ಣದ ಎಲೆಗಳಿಂದಾಗಿ ಟ್ರಕ್‌ಗಳು ಇನ್ನಷ್ಟು ದಪ್ಪನಾಗಿ ಕಾಣುತ್ತವೆ. ನನ್ನ ಮಟ್ಟಿಗೆ ಈ ಪಡೆಗಳು ಅನಂತ, ಅಸಂಖ್ಯ, ಅಗಣಿತ, ಅಗಾಧ.

"ಇವತ್ತು ರಾತ್ರಿ ಬಂದವರಲ್ಲಿ ಹನಾಯ್‌ನಿಂದಲೇ ಸುಮಾರು ಜನ ಬಂದಿದ್ದಾರೆ", ಎಂದು ನೂ ನನ್ನ ಕಿವಿಯಲ್ಲಿ ಪಿಸುಗುಟ್ಟುತ್ತಾಳೆ. ಅವಳ ಮನೋಸ್ಥಿತಿ ನನ್ನದಕ್ಕಿಂತ ಬೇರೆಯಲ್ಲ. ಪ್ರೇಮ ಅವಳ ಹೃದಯ ಪಾತ್ರೆಯಿಂದಲೂ ತುಂಬಿ ಹೊರಸೂಸುತ್ತಿದೆ. ಉದಾರ ಪ್ರೇಮ. ಭಾವೋದ್ರೇಕದ, ನಿಸ್ವಾರ್ಥ ಪ್ರೇಮ. ಅದು ಹೋರಾಟಗಾರರೆಲ್ಲರ ಲಕ್ಷಣ. ನಾನು ನೂಳ ಭುಜದ ಸುತ್ತ ನನ್ನ ತೋಳುಗಳನ್ನು ಉಂಗುರ ಮಾಡಿ ತಬ್ಬಿ ಹಿಡಿಯುತ್ತೇನೆ. ಇಬ್ಬರೂ ಮಾತನಾಡುವುದಿಲ್ಲ. ಮೌನ ಬಂಗಾರ, ನನ್ನ ಹಿಡಿತವನ್ನು ಬಲಗೊಳಿಸುತ್ತೇನೆ. ಇದೋ-ಇವಳೂ ನನ್ನಂತೆಯೇ ಹನಾಯ್‌ನ ಮಗಳು. ಕೆಚ್ಚೆದೆಯ ಹೋರಾಟಗಾತಿ. ನನ್ನೊಂದಿಗೆ ನಿಂತಿದ್ದಾಳೆ ಈ ಬೆಟ್ಟದ ತಪ್ಪಲಿನಲ್ಲಿ. ಈ ಬೆಟ್ಟವೇ ಬಾಂಬ್ ತೂತುಕುಳಿಗಳಿಂದ ತುಂಬಿ ಹೋಗಿದೆ. ನಮ್ಮ ಈ ರಸ್ತೆ ಅಂತ್ಯವೇ ಇಲ್ಲ ಎಂಬಂತೆ ಹರಿಯುತ್ತದೆ.

ನಾವು ಪರಸ್ಪರರನ್ನು ಅರಿತಿದ್ದೇವೆ. ಈ ಭಾವೋದ್ವೇಗ, ನಮಗೆ ಅರ್ಥವಾಗುತ್ತದೆ. ಸಂತಸವನ್ನು ನಾವು ಸಂಪೂರ್ಣವಾಗಿ ಅನುಭವಿಸುತ್ತೇವೆ.

(ನವಕರ್ನಾಟಕ ಪ್ರಕಾಶನದವರು ಪ್ರಕಟಿಸುತ್ತಿರುವ "ವಿಶ್ವಕಥಾಕೋಶ"ದ ಮೂರನೇ ಸಂಪುಟದ "ಕಾಡಿನಲ್ಲಿ ಬೆಳದಿಂಗಳು" ಎಂಬ ಕಥಾ ಸಂಗ್ರಹದಿಂದ ಆಯ್ದುಕೊಳ್ಳಲಾಗಿದೆ)

●

"ಪಕ್ಷದ ರಾಜ್ಯಸಮ್ಮೇಳನಕ್ಕೆ ಸಿದ್ಧತೆ"

"ಸಂಘಟನಾ ಶಕ್ತಿಯ ಪ್ರದರ್ಶನಕ್ಕೆ ನಿರ್ಧಾರ"

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ ಹನ್ನೊಂದನೇ ರಾಜ್ಯ ಸಮ್ಮೇಳನವು 1981ನೇ ಇಸವಿ ಡಿಸೆಂಬರ್ 11ರಿಂದ 14ರ ತನಕ ಕಠಾವಳಿ ನಗರ ಮಂಗಳೂರಿನಲ್ಲಿ ನಡೆಯಲಿದೆ. ಕರ್ನಾಟಕ ರಾಜ್ಯದ ಹದಿನೆಂಟು ಜಿಲ್ಲೆಗಳನ್ನು ಪ್ರತಿನಿಧೀಕರಿಸಿ ಸುಮಾರು 200ಕ್ಕಿಂತಲೂ ಹೆಚ್ಚಿಗೆ ಪ್ರತಿನಿಧಿಗಳು ಭಾಗವಹಿಸಲಿರುವ ರಾಜ್ಯ ಸಮ್ಮೇಳನವನ್ನು ಯಶಸ್ವಿಗೊಳಿಸಲು ಪಕ್ಷದ ದಕ್ಷಿಣ ಕನ್ನಡ ಜಿಲ್ಲಾ ಸಮಿತಿಯು ಶ್ರಮಿಸುತ್ತಿದೆ. ರಾಜ್ಯದಲ್ಲಿ ಅತ್ಯಂತ ದೊಡ್ಡದಾದ ಮತ್ತು ಹಿರಿದಾದ ಪಕ್ಷದ ದ.ಕ. ಜಿಲ್ಲಾ ಘಟಕವು ಸಮ್ಮೇಳನದ ಕೊನೆಯ ದಿನ, ಅಂದರೆ ಡಿಸೆಂಬರ್ 14ರಂದು ಈ ಹಿಂದೆಂದೂ ನಡೆಯದಷ್ಟು ದೊಡ್ಡ ಪ್ರಮಾಣದ ಮೆರವಣಿಗೆ, ಬಹಿರಂಗ ಸಭೆಗಳನ್ನು ನಡೆಸಲು ನಿರ್ಧಾರ ಮಾಡಿದೆ. ಎರಡು ಸಹಸ್ರಕ್ಕಿಂತಲೂ ಹೆಚ್ಚಿಗೆ ಕೆಂಪು ಸಮವಸ್ತ್ರಧಾರಿ ಸ್ವಯಂ ಸೇವಕರು, ಬಾಲ ಸ್ವಯಂ ಸೇವಕರು, ಮಹಿಳಾ ಸ್ವಯಂ ಸೇವಕರು ಕಲಾಮೇಳಗಳಿಂದ ಕೂಡಿದ ವರ್ಣರಂಜಿತ ಮೆರವಣಿಗೆಯನ್ನು ಸಂಘಟಿಸಲು ತೀರ್ಮಾನಿಸಲಾಗಿದೆ. 14ರಂದು ಬಹಿರಂಗ ಸಭೆಯಾದ ಮೇಲೆ ರಾತ್ರಿಯಿಡೀ ಸಾಂಸ್ಕೃತಿಕ ಕಾರ್ಯಕ್ರಮಗಳ ಪ್ರದರ್ಶನವನ್ನೂ ಸಂಘಟಿಸಲಾಗುವುದು.

ರಾಜ್ಯ ಸಮ್ಮೇಳನದ ಅಂಗವಾಗಿ ಕೊನೆಯ ದಿನ ನಡೆಯಲಿರುವ ಮೆರವಣಿಗೆ, ಬಹಿರಂಗ ಸಭೆಗಳಿಗೆ ರಾಜ್ಯದಲ್ಲಿ ನಮ್ಮ ಸಂಘಟನೆಗಳಿರುವ ಎಲ್ಲಾ ಕಡೆಗಳಿಂದ ದೊಡ್ಡ ಸಂಖ್ಯೆಯಲ್ಲಿ ಜನರನ್ನು ತರುವುದಕ್ಕೆ ಪ್ರಯತ್ನಿಸಬೇಕು. 14ರಂದು ಮಂಗಳೂರಿನಲ್ಲಿ ನಡೆಯಲಿರುವ ಕಾರ್ಯಕ್ರಮಗಳು ರಾಜ್ಯಮಟ್ಟದ ಸಂಘಟನೆ ಮತ್ತು ಶಕ್ತಿಯನ್ನು ಪ್ರತಿಬಿಂಬಿಸಬೇಕು. ಪಕ್ಷದ ಸಂಘಟನಾ ಶಕ್ತಿಯನ್ನು ಪ್ರದರ್ಶಿಸುವುದರ ಮೂಲಕ ಆಳುವ ವರ್ಗಗಳಿಗೂ, ರೈತ-ಕಾರ್ಮಿಕ ವಿರೋಧಿ, ಜನವಿರೋಧಿ ಹಾಗೂ ಸರ್ವಾಧಿಕಾರಿ ಕಾಂಗ್ರೆಸ್ ಸರಕಾರಕ್ಕೂ ಎಚ್ಚರಿಕೆಯನ್ನು ಕೊಡಬೇಕು. ಅನುಭವಗಳನ್ನು ಹಂಚಿಕೊಂಡು, ಸೌಹಾರ್ದತೆಯನ್ನು ಪಡೆದು ಹೊಸ ಸ್ಫೂರ್ತಿಯಿಂದ ಮುನ್ನಡೆಯಲು ಸಾಧ್ಯವಾಗಬೇಕು.

ಆದುದರಿಂದಲೇ ರಾಜಕೀಯ ಮತ್ತು ಸಂಘಟನಾ ಪ್ರಾಮುಖ್ಯತೆಯನ್ನು ಮನಗಂಡು, ಡಿಸೆಂಬರ್ 14ರಂದು ಮಧ್ಯಾಹ್ನದ ಮೇಲೆ ಮಂಗಳೂರಿನಲ್ಲಿ ನಡೆಯಲ್ಲಿರುವ ಮೆರವಣಿಗೆ, ಬಹಿರಂಗ ಸಭೆಗಳಲ್ಲಿ ರಾಜ್ಯದ ಎಲ್ಲಾ ಕಡೆಗಳಿಂದಲೂ ಕಾರ್ಮಿಕರು, ರೈತರು, ವಿದ್ಯಾರ್ಥಿ ಯುವಜನತೆ, ಮಹಿಳೆಯರು, ಮತ್ತಿತರ ಜನವಿಭಾಗದವರನ್ನೂ, ಪಕ್ಷದ ಮತ್ತು ಸಾಮೂಹಿಕ ಸಂಘಟನೆಗಳ ಕಾರ್ಯಕರ್ತರುಗಳನ್ನೂ ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸುವಂತೆ ಮಾಡುವುದಕ್ಕೆ ಪಕ್ಷದ ಎಲ್ಲಾ ಘಟಕಗಳೂ ವಿಶೇಷ ಶ್ರಮ ವಹಿಸಬೇಕು. ಈಗಾಗಲೇ ಸ್ವಾಗತ ಸಮಿತಿಯೊಂದನ್ನು ರಚಿಸಲಾಗಿದ್ದು, ಸಮ್ಮೇಳನದ ತಯ್ಯಾರಿಯು ಭರದಿಂದ ಸಾಗುತ್ತಲಿದೆ. ದ.ಕ. ಜಿಲ್ಲೆಯ ಸಂಗಾತಿಗಳೊಂದಿಗೆ ಭುಜಕ್ಕೆ ಭುಜಕೊಟ್ಟು ಸಮ್ಮೇಳನವನ್ನು ಯಶಸ್ವಿಗೊಳಿಸಲು ನಾವೆಲ್ಲರೂ ಮುಂದಾಗೋಣ.

-ಎಂ. ಕೆ. ಭಟ್

ಗೋಕಾಕ್ ವರದಿ ಜಾರಿಗೆ ಒತ್ತಾಯ

ಶಿಕ್ಷಣದ ಎಲ್ಲ ಹಂತಗಳಲ್ಲಿ ಕನ್ನಡಕ್ಕೇ ಪ್ರಥಮ ಪ್ರಾಶಸ್ತ್ಯವಿರುವಂತೆ ಸಲಹೆ ನೀಡಿರುವ ಗೋಕಾಕ್ ವರದಿಯನ್ನು ತಕ್ಷಣ ಜಾರಿಗೆ ತರುವಂತೆ ಬಂಡಾಯ ಸಾಹಿತ್ಯ ಸಂಘಟನೆಯ ಕಲಬುರ್ಗಿ ಜಿಲ್ಲಾ ಘಟಕವು ರಾಜ್ಯ ಸರಕಾರವನ್ನು ಒತ್ತಾಯಪಡಿಸಿದೆ. ಸರಕಾರವು ತಾನೇ ನಿಯಮಿಸಿದ್ದ ಗೋಕಾಕ್ ಸಮಿತಿಯ ವರದಿಯನ್ನು ಜಾರಿಗೆ ತರುವಲ್ಲಿ ಮೀನ-ಮೇಷ ಮಾಡುತ್ತಿರುವುದನ್ನು ತೀವ್ರವಾಗಿ ಖಂಡಿಸಿದ ಬಂಡಾಯ ಸಾಹಿತ್ಯ ಸಂಘಟನೆಯು, ರಾಜ್ಯೋತ್ಸವದ ಬೆಳ್ಳಿಹಬ್ಬದ ಸಂದರ್ಭದಲ್ಲಿಯೂ ಕನ್ನಡಕ್ಕೆ ಪ್ರಥಮ ಪ್ರಾಶಸ್ತ್ಯ ನೀಡುವ ಪ್ರಾಮಾಣಿಕ ಪ್ರಯತ್ನ ಮಾಡದಿರುವ ಬಗ್ಗೆ ತನ್ನ ತೀವ್ರ ಪ್ರತಿಭಟನೆಯನ್ನು ವ್ಯಕ್ತಪಡಿಸಿದೆ.

ಬಂಡಾಯ ಸಾಹಿತ್ಯ ಸಂಘಟನೆಯ ಕಲಬುರ್ಗಿ ಜಿಲ್ಲಾ ಘಟಕದ ಸಭೆ ಇತ್ತೀಚೆಗೆ ನಡೆದು ಕಲಬುರ್ಗಿಯ ಬಸವಕ್ರಾಂತಿ ವಾರಪತ್ರಿಕೆಯ ಸಂಪಾದಕ ವೀ. ಶಿ. ಸ್ವಾಮಿಯವರನ್ನು ಸಂಚಾಲಕರನ್ನಾಗಿ ಆಯ್ಕೆ ಮಾಡಲಾಗಿದೆ. ●

ಮನವಿ ಪತ್ರ

ಇತ್ತೀಚೆಗೆ ಕೋಲಾರ ಜಿಲ್ಲೆಯ ಬಂಗಾರಪೇಟೆಯೂ ಸೇರಿ 3 ತಾಲ್ಲೂಕುಗಳಲ್ಲಿ ಮಿದುಳುಜ್ವರದಿಂದ 34 ಮಕ್ಕಳು ಅಕಾಲ ಮರಣಕ್ಕೆ ತುತ್ತಾಗಿದ್ದಾರೆ. ಮಿದುಳುಜ್ವರದ ತಹಬಂದಿಗೆ ಕೂಡಲೇ ಕ್ರಮ ಕೈಗೊಳ್ಳುವಂತೆ ಡಿ. ವೈ. ಎಫ್. ಐ. ಬಂಗಾರಪೇಟೆ ಘಟಕದ ಪರವಾಗಿ 10-11-81 ರಂದು ಬಂಗಾರಪೇಟೆ ಪುರಸಭೆ ಅಧ್ಯಕ್ಷರಿಗೆ ಮನವಿ ಸಲ್ಲಿಸಲಾಗಿದೆ.

ಸಾರ್ವಜನಿಕರಿಗೆ ಶುದ್ಧವಾದ ನೀರು ಸರಬರಾಜು, ನಗರ ನೈರ್ಮಲ್ಯೀಕರಣದತ್ತ ತೀವ್ರ ಗಮನಹರಿಸಬೇಕೆಂದು ಮನವಿಯಲ್ಲಿ ಒತ್ತಾಯಿಸಲಾಗಿದೆ.

ವಿಚಾರ ಸಂಕಿರಣ

ಕರ್ನಾಟಕ ಪ್ರಾಂತ ರೈತಸಂಘದ ಗುಲ್ಬರ್ಗಾ ಜಿಲ್ಲಾ ಘಟಕದ ವತಿಯಿಂದ ಕಿರಣಗಿ ಗ್ರಾಮದಲ್ಲಿ 3-11-81ರಂದು "ರೈತನ ಸಮಸ್ಯೆಗಳು" ಕುರಿತು ವಿಚಾರ ಸಂಕಿರಣ ಏರ್ಪಡಿಸಲಾಗಿತ್ತು. ಈ ವಿಚಾರ ಸಂಕಿರಣದಲ್ಲಿ 200ಕ್ಕೂ ಮಿಕ್ಕಿ ರೈತರು ಭಾಗವಹಿಸಿದ್ದರು.

ವಿಚಾರ ಸಂಕಿರಣದಲ್ಲಿ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ರಾಜ್ಯ ಸೆಕ್ರೆಟಾರಿಯೆಟ್ ಸದಸ್ಯ ಕಾಂ. ವಿ. ಜೆ. ಕೆ. ನಾಯರ್ ಪಾಲ್ಗೊಂಡಿದ್ದರು. ಕಾಂ. ಕಾಂತಯ್ಯ ಅಧ್ಯಕ್ಷತೆ ವಹಿಸಿದ್ದರು. ಕೊನೆಯಲ್ಲಿ ಕಾಂ. ಕಲ್ಲಪ್ಪ ಕಿರಣಗಿ ವಂದಿಸಿದರು.

ಪಿತೂರಿಯಲ್ಲಿ ಚುನಾವಣಾ ಆಯೋಗ ಭಾಗಿ

(1ನೇ ಪುಟದಿಂದ)

ಮರುಚುನಾವಣೆಯನ್ನು ಆದಷ್ಟು ಮುಂದೂಡಲು ಕಾಂಗ್ರೆಸ್ ಪ್ರಯತ್ನಿಸುತ್ತಿತ್ತು. ಸೆಪ್ಟೆಂಬರ್ ತಿಂಗಳಲ್ಲಿ ಮುಖ್ಯ ಚುನಾವಣಾ ಕಮೀಷನರರು ನವೆಂಬರ್ 22ರಂದು ಗಢವಾಲ್ ಕ್ಷೇತ್ರದ ಮತದಾನ ನಡೆಯಲಿರುವುದಾಗಿ ಘೋಷಿಸಿದ್ದರು. ಮತದಾನ ಕೇವಲ ಒಂದುವಾರವಿದ್ದಾಗ ಚುನಾವಣೆಯನ್ನು ಮುಂದೂಡಿದ್ದಾದರೂ ಯಾಕೆ? ಚುನಾವಣಾ ಆಯೋಗದ ಕಾರ್ಯದರ್ಶಿ ಗಣೇಶನ್ ಅವರು ಗಢವಾಲ್ ಕ್ಷೇತ್ರಕ್ಕೆ ಭೇಟಿ ನೀಡಿ ಪರಿಶೀಲಿಸಿದ ನಂತರ ಚುನಾವಣೆಯನ್ನು ಮುಂದೂಡುವ ಪ್ರಶ್ನೆ ಇಲ್ಲವೆಂದು ನವೆಂಬರ್ 13ರಂದು ತಿಳಿಸಿದ್ದರು. ತನ್ನ ಕಾರ್ಯದರ್ಶಿಯ ವರದಿಯನ್ನವಲಂಬಿಸದೇ ಚುನಾವಣೆ ಮುಂದೂಡಿದ್ದರ ಚಿದಂಬರ ರಹಸ್ಯವೇನು?

ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆಯ ಪರಿಸ್ಥಿತಿ ಹದಗೆಟ್ಟಿರುವುದರಿಂದ ಗಢವಾಲ್ ಕ್ಷೇತ್ರಕ್ಕೆ ಬೇಕಾದಷ್ಟು ಪೋಲೀಸರನ್ನು ಒದಗಿಸುವಲ್ಲಿ ತನ್ನ ಅಸಹಾಯಕತೆಯನ್ನು ಯು. ಪಿ. ಯ ಮುಖ್ಯ ಮಂತ್ರಿ ವಿಶ್ವನಾಥ ಪ್ರತಾಪ್‌ಸಿಂಗ್‌ರು ಮುಖ್ಯ ಚುನಾವಣಾ ಕಮೀಷನರರಲ್ಲಿ ತಿಳಿಸಿದ್ದರಂತೆ. ಇದು ಚುನಾವಣೆ ಮುಂದೂಡಿಕೆಗೆ ಕಾರಣ!

ಎಲ್ಲ ಪ್ರಜಾಪ್ರಭುತ್ವ ಶಕ್ತಿಗಳ ಬೆಂಬಲಿತ ಅಭ್ಯರ್ಥಿ ಬಹುಗುಣರನ್ನು ಎದುರಿಸುವುದು ಕಾಂಗ್ರೆಸ್‌ಗೆ ಸಾಧ್ಯವಿಲ್ಲದಾಗಿದೆ. ಬೆಲೆ ಏರಿಕೆ ಮುಂತಾದ ಸಂಕಷ್ಟಗಳಿಂದ ನೊಂದಿರುವ ಮತದಾರರನ್ನು ಎದುರಿಸುವ ಧೈರ್ಯವಿಲ್ಲದಾಗಿದೆ. ಕೇರಳದಲ್ಲಿ ಮಾಡಿದ್ದೂ ಇದನ್ನೇ. ಚುನಾವಣಾ ಆಯೋಗ ಕಾಂಗ್ರೆಸ್ ಧುರೀಣರ ರಾಜಕೀಯ ಒತ್ತಡಕ್ಕೆ ಮಣಿದಿದೆ. ಯು. ಪಿ. ಮುಖ್ಯಮಂತ್ರಿಯು ದೆಹಲಿಯಲ್ಲಿ ಠಿಕಾಣಿ ಹೂಡಿ ವ್ಯೂಹ ರಚಿಸಿದ್ದರು.


ವಿರೋಧಿ ಪಕ್ಷಗಳ ಮನವಿ

ಸಂವಿಧಾನದಂತೆ ಚುನಾವಣೆಗಳನ್ನು ನಡೆಸಬೇಕಾದದ್ದು ಚುನಾವಣಾ ಆಯೋಗ. ಚುನಾವಣೆಗೆ ಬೇಕಾದ ಸಿಬ್ಬಂಧಿ ಮತ್ತು ರಕ್ಷಣೆ ಕೊಡಬೇಕಾಗಿದ್ದುದು ರಾಜ್ಯ ಮತ್ತು ಕೇಂದ್ರ ಸರಕಾರಗಳು. ತಮ್ಮ ಕರ್ತವ್ಯ ನಿರ್ವಹಿಸಲು ವಿಫಲವಾದ ಉತ್ತರ ಪ್ರದೇಶ ಸರಕಾರವನ್ನು ಉಚ್ಚಾಟಿಸಬೇಕು ಎಂದು ವಿರೋಧಪಕ್ಷಗಳ ಧುರೀಣರು ರಾಷ್ಟ್ರಪತಿಗೆ ಮನವಿ ಸಲ್ಲಿಸಿದರು.

ಜಗತ್ತಿನಲ್ಲೆ ದೊಡ್ಡ ಪ್ರಜಾಪ್ರಭುತ್ವ ದೇಶವಾದ ಭಾರತದಲ್ಲಿ ಒಂದು ಕ್ಷೇತ್ರದ ಮರುಚುನಾವಣೆ ನಡೆಸಲು ಅಶಾಧ್ಯವಾಗಿರುವುದು ಹಾಸ್ಯಾಸ್ಪದ ಎಂದು ವಿರೋಧಿ ಪಕ್ಷಗಳ ಧುರೀಣರು ರಾಷ್ಟ್ರಪತಿಗೆ ತಿಳಿಸಿದ್ದಾರೆ. ಚುನಾವಣಾ ಆಯೋಗಕ್ಕೆ ಸಹಕರಿಸದಿರುವುದು ಸಂವಿಧಾನದ ಉಲ್ಲಂಘನೆ ಎಂದಿರುವರು. ಈ ಪ್ರವೃತ್ತಿ ಮುಂದುವರೆದರೆ ಚುನಾವಣಾ ಪದ್ಧತಿಯೇ ಇತಿಶ್ರೀಯಾಗುವ ಸಂಭವವಿದೆ ಎಂದು ಎಚ್ಚರಿಸಿದ್ದಾರೆ.

ಸಂವಿಧಾನವನ್ನು ರಕ್ಷಿಸುವ ಹೊಣೆ ಹೊತ್ತು ಪ್ರತಿಜ್ಞೆ ಸ್ವೀಕರಿಸಿದವರಿಂದಲೇ ಸಂವಿಧಾನದ ಉಲ್ಲಂಘನೆಯಾಗುತ್ತಿದೆ. ಗಢವಾಲ್ ಕ್ಷೇತ್ರದ ಮರು ಚುನಾವಣೆ ಕೂಡಲೇ ನಡೆಸುವಂತೆ ಕ್ರಮ ಕೈಗೊಳ್ಳಬೇಕೆಂದು ವಿರೋಧ ಪಕ್ಷಗಳ ಮುಖಂಡರು ರಾಷ್ಟ್ರಪತಿಯವರನ್ನು ಎಚ್ಚರಿಸಿದ್ದಾರೆ.

ಚುನಾವಣೆ ನಡೆಸಲು ರಕ್ಷಣೆ ಮತ್ತು ಸಿಬ್ಬಂಧಿಯನ್ನು ಕೊಡಬೇಕು ಎಂದು ಕೋರುವ ಅಧಿಕಾರವುಳ್ಳ ಚುನಾವಣಾ ಆಯೋಗ ಕಾಂಗ್ರೆಸ್‌ಯೊಂದಿಗೆ ತಾಳಹಾಕಿರುವುದು ನಾಚಿಗ್ಗೇಡಿನ ವಿಷಯ. ಚುನಾವಣಾ ಆಯೋಗ ಸ್ವತಂತ್ರ ಎಂಬ ಸಂವಿಧಾನದ ಅಂಶ ಹುಸಿಯಾಗಿದೆ. ದೇಶದ ಪ್ರಜಾಪ್ರಭುತ್ವ ಪ್ರೇಮಿ ಜನತೆ ಮತ್ತೆ ಸರ್ವಾಧಿಕಾರದತ್ತ ವಾಲುತ್ತಿರುವ ಆಳುವವರ್ಗವನ್ನು ಎದುರಿಸಲು ಸನ್ನದ್ಧರಾಗಬೇಕು. ಇಲ್ಲವಾದ್ದಲ್ಲಿ ಪಾರ್ಲಿಮೆಂಟರಿ ಪ್ರಜಾಪ್ರಭುತ್ವಕ್ಕೆ ಮಂಗಳವಾದೀತು!



ಪಕ್ಷದ ದ. ಕ. ಜಿಲ್ಲಾ ಸಮ್ಮೇಳನದ ಅಂಗವಾಗಿ ನ. 16ರಂದು ಕುಂದಾಪುರದಲ್ಲಿ ನಡೆದ ಬೃಹತ್ ಮೆರವಣಿಗೆ ಮತ್ತು ಸಭೆಯನ್ನುದ್ದೇಶಿಸಿ ಕಾಂ. ಎಂ. ಕೆ. ಮಾತನಾಡುತ್ತಿರುವುದು.

ಘಟಪ್ರಭಾ ಚಲೋ ಮೆರವಣಿಗೆ

ನವೆಂಬರ್ 10ರಂದು ಘಟಪ್ರಭಾ ಎಡದಂಡೆ ಕಾಲುವೆಯ ಕಾರ್ಮಿಕರು ಘಟಪ್ರಭಾ ರೈಲ್ವೆ ನಿಲ್ದಾಣದಿಂದ ಸೂಪರಿಂಟೆಂಡೆಂಟ್ ಇಂಜಿನೀಯರರ ಕಚೇರಿಯವರೆಗೆ ಮೆರವಣಿಗೆ ಹೊರಡಿಸಿ ತಮ್ಮ ಬೇಡಿಕೆಗಳ ಕುರಿತಾದ ಮನವಿಪತ್ರ ಸಲ್ಲಿಸಿದರು.

ಜಮಖಂಡಿ, ಬಿಲಳಗಿ, ಮುಧೋಳ, ರಾಯಬಾಗ, ಗೋಕಾಕ್ ತಾಲ್ಲೂಕುಗಳಿಂದ ಸುಮಾರು 500ಕ್ಕೂ ಮಿಕ್ಕಿ ಕಾರ್ಮಿಕರು ಆಗಮಿಸಿದ್ದರು.

ಹತ್ತಾರು ವರ್ಷಗಳಿಂದ ಹಂಗಾಮಿ ಕೆಲಸಮಾಡುತ್ತ ಬಂದಿರುವ ಪಾಟಕರಿ (ನೀರುಬಿಡುವವರು)ಗಳ ಸೇವೆಯನ್ನು ಕಾಯಂಗೊಳಿಸಬೇಕು, ಕನಿಷ್ಠ ಕೂಲಿ 15ರೂ. ಇರಬೇಕು, ವಿಳಂಬವಾಗಿ ಪಗಾರ (ಸಂಬಳ) ಪಾವತಿ ಮಾಡುವುದು ಕೂಡಲೇ ನಿಲ್ಲಬೇಕು... ಇವುಗಳು ಘಟಪ್ರಭಾ ಎಡದಂಡೆ ಕಾಲುವೆಯ ಕಾರ್ಮಿಕರ ಬೇಡಿಕೆಗಳು.

ಮೆರವಣಿಗೆಯಲ್ಲಿ ಬಂದ ಕಾರ್ಮಿಕರು ಸೂಪರಿಂಟೆಂಡೆಂಟ್ ಕಚೇರಿಗೆ ತೆರಳಿ ಅಲ್ಲಿ ಧರಣಿ ನಡೆಸಿದರು. ಅಧಿಕಾರಿಗಳು ಕಾರ್ಮಿಕರು ಧರಣಿ ಕುಳಿತಲ್ಲೇ ಬಂದು ಮನವಿ ಸ್ವೀಕರಿಸಿದರು.

ಧರಣಿ ಕುಳಿತ ಕಾರ್ಮಿಕರನ್ನುದ್ದೇಶಿಸಿ ಕಾಂ. ಡಿ. ಆರ್. ನಾಂದ್ರೇಕರ, ಬಿ. ಎನ್. ಧಾರವಾಡಕರ, ಚಿಕ್ಕೂರ, ಎಸ್. ಐ. ಮೋದಿ ಮತ್ತು ಎ. ಎಚ್. ದೇಸಾಯಿ ಈ ಮೊದಲಾದವರು ಮಾತನಾಡಿದರು.

ಧರಣಿ ಕಾರ್ಯಕ್ರಮ ಮತ್ತು ಮೆರವಣಿಗೆಗೆ ಕಾಂ. ಬಿ. ಎನ್. ಧಾರವಾಡಕರ ನೇತೃತ್ವ ನೀಡಿದ್ದರು.

ದೆಹಲಿಯಲ್ಲಿ ಬೃಹತ್ ರ್‍ಯಾಲಿ

(1ನೇ ಪುಟದಿಂದ)

ದ್ದರು. ಹೆಂಗಸರು ಗಂಡಸರು, ಯುವಕರು ತಮ್ಮ ತಮ್ಮ ಸಂಘಟನೆ ಬಾವುಟಗಳನ್ನು ಹಿಡಿದು ಬೋಟ್‌ಕ್ಲಬ್‌ನಲ್ಲಿ ನೆರದಿದ್ದರು. ತಮ್ಮನ್ನು ಸಂಕಷ್ಟಕ್ಕೀಡುಮಾಡಿರುವ ಇಂದಿರಾ ನೇತೃತ್ವದ ಸರಕಾರದ ಮೇಲೆ, ಪ್ರಸಕ್ತ ವ್ಯವಸ್ಥೆಯ ಮೇಲೆ ಆಕ್ರೋಷ ವ್ಯಕ್ತಪಡಿಸುತ್ತಿದ್ದರು. ಎನ್. ಸಿ. ಸಿ.ಯವರು ಭಾರತ್ ಬಂದ್‌ನ ನಿರ್ಣಯ ಮಂಡಿಸಿದಾಗ ಹರ್ಷೋದ್ಗಾರದಿಂದ ನಿರ್ಣಯವನ್ನು ಸ್ವಾಗತಿಸಿದ ಕಾರ್ಮಿಕ ಬಾಂಧವರ ಮುಖದಲ್ಲಿ ಅವಿರತ ಹೋರಾಡುವ ಛಲ ಎದ್ದು ಕಾಣುತ್ತಿತ್ತು.

ನವೆಂಬರ್ 23ರಂದು ದೆಹಲಿಯಲ್ಲಿ ನಡೆದ ಐತಿಹಾಸಿಕ ರ್‍ಯಾಲಿಯಲ್ಲಿ ಉತ್ಸಾಹದಿಂದ ಪಾಲ್ಗೊಂಡ ರಾಜ್ಯದ ಕಾರ್ಮಿಕ ಬಾಂಧವರಿಗೆ ಕರ್ನಾಟಕ ಸಿ. ಐ. ಟಿ. ಯು. ರಾಜ್ಯಸಮಿತಿ ಅಭಿನಂದನೆ ತಿಳಿಸಿದೆ.

ಪ್ರಜಾಪ್ರಭುತ್ವ ಹಕ್ಕುಗಳನ್ನು ದಮನಮಾಡುವ ಯತ್ನದಲ್ಲಿರುವ ಸರಕಾರದ ಧೋರಣೆಗಳನ್ನು ಎದುರಿಸಲು ಕಂಕಣಬದ್ಧರಾಗುವಂತೆ ಕರೆ ನೀಡಿದೆ.

"ಎಸ್. ಎಫ್. ಐ. ವಿಸ್ತೃತ ಸಭೆ"

ಈ ಹಿಂದಿನ ರಾಜ್ಯಸಮಿತಿ ಸಭೆಯಲ್ಲಿ ನಿರ್ಧರಿಸಿದಂತೆ ಡಿಸೆಂಬರ್ 8 ಮತ್ತು 9ರಂದು ಬಳ್ಳಾರಿ ಜಿಲ್ಲೆಯ ಹೊಸಪೇಟೆಯಲ್ಲಿ ಎಸ್. ಎಫ್. ಐ. ರಾಜ್ಯಸಮಿತಿ ವಿಸ್ತೃತ ಸಭೆ ನಡೆಯಲಿದೆ. ಕಾಂ. ಎಂ. ಎ. ಬೇಬಿ, ಎಸ್. ಎಫ್. ಐ. ಅಧ್ಯಕ್ಷರು ಭಾಗವಹಿಸಲಿದ್ದಾರೆ.

ಸಭೆಯ ಬಗ್ಗೆ ಎಲ್ಲಾ ಸಿದ್ಧತೆ ನಡೆದಿದೆ. ಡಿ. 8ರಂದು ಬೆಳಿಗ್ಗೆ 10ರಿಂದ ಸಭೆ ಆರಂಭವಾಗಲಿದೆ. 9ರಂದು ಹೊಸಪೇಟೆಯಲ್ಲಿ ವಿದ್ಯಾರ್ಥಿಗಳ ರ್‍ಯಾಲಿ ಮತ್ತು ಸಾರ್ವಜನಿಕ ಸಭೆಯನ್ನು ಸಂಘಟಿಸಲಾಗಿದೆ.

ದೂರದಿಂದ ಬರುವ ಪ್ರತಿನಿಧಿಗಳು ಮೊದಲಿನ ದಿನವೇ ಹೊಸಪೇಟೆ ತಲುಪಬೇಕು. ಬಸ್ ನಿಲ್ದಾಣದಲ್ಲಿ ಎಸ್. ಎಫ್. ಐ. ಧ್ವಜ ಹಿಡಿದ ಸ್ವಯಂಸೇವಕರು ಇರುತ್ತಾರೆ. ಕೆ. ಎಸ್. ಆರ್. ಟಿ. ಸಿ. ಬಸ್ ನಿಲ್ದಾಣದ ಕ್ಯಾಂಟೀನಿನಲ್ಲೂ ಕೂಡ ವಿವರಗಳನ್ನು ಕೇಳಿ ತಿಳಿದುಕೊಳ್ಳಬಹುದು. ವಿಸ್ತೃತ ಸಭೆಯನ್ನು ಯಶಸ್ವಿಗೊಳಿಸಬೇಕೆಂದು ಈ ಮೂಲಕ ಕೇಳಿಕೊಳ್ಳಲಾಗಿದೆ.

—ಆರ್. ಜಯಕುಮಾರ್
ಎಸ್. ಎಫ್. ಐ. ರಾಜ್ಯಸಮಿತಿ ಅಧ್ಯಕ್ಷ

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist) Karnataka State Committee, L-56, K. V. Temple Street Sultanpet, Bangalore-560 053. Editorial and managerial office : L-56, K. V. Temple Street, Sultanpet Bangalore-560 053. Phone-24154
EDITOR : M. K. BHAT